RESOLUTION RATIFYING THE AMENDMENT OF ARTICLE 81 OF THE CONSTITUTION.

Sri A. G. RAMACHANDRA RAO (Minister for Law and Education).—There is a special motion which has been referred by the Centre to this Legislature. Sir, I beg to move:

"That this House ratifies the amendment of Article 81 of the Constitution proposed to be made by the Constitution (Second Amendment) Bill, 1952, as proprosed by the two Houses of Parliament."

The motion passed by the two Houses of Parliament is to this effect:

Amendment of Article 81:

"In sub-clause (*b*) of Clause (1) of Article 81 of the Constitution, the words and figures 'not less than one member for every 750,000 of the population and' shall be omitted."

ಸ್ವಾಮಿ, ಇದು ಬಹಳ ಸುಲಭವಾದ ಅದರೂ ಅತಿ ಮುಖ್ಯವಾದ ಒಂದು ನಿರ್ಣಯ. ಮೈಸೂರಿನಂಥ ಇತರ States ಗಳಿಂದ ಕೇಂದ್ರದ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಹೇಗಿರಬೇಕು ಮತ್ತು ಅದನ್ನು ಬದಲಾವಣೆ ಮಾಡುವ ಕಾಲದಲ್ಲಿ ಯಾವ ಮಾರ್ಗವನ್ನನುಸರಿಸಿ ಮಾಡಬೇಕೆಂದು ರಾಜ್ಯಾಂಗ ಶಾಸನದಲ್ಲಿ ವಿದಿತವಾಗಿದೆ. 1952ನೆಯ ಇಸವಿಯೊಳಗೆ ನಡೆದಿರತಕ್ಕ ಚುನಾವಣೆಗಳಲ್ಲಿ House of people ಗೆ ಕನಿಷ್ಟಪಕ್ಷ 5 ಲಕ್ಷ ಪ್ರಜಾಸಂಖ್ಯೆಯುಳ್ಳ ಒಂದು ಚುನಾವಣಾ ಕ್ಷೇತ್ರಕ್ಕೆ ಒಬ್ಬರಿಗಿಂತ ಹೆಚ್ಚಿಗೆ ಪ್ರಾತಿನಿಧ್ಯ ಕೊಡಕೂಡದು, 7½ ಲಕ್ಷ ಪ್ರಜಾಸಂಖ್ಯೆ ಇರತಕ್ಕದ್ದಕ್ಕೆ ಒಂದಕ್ಕಿಂತ ಕಡಮೆ ಪ್ರಾತಿನಿಧ್ಯವಿರಕೂಡದೆಂದು 81ನೆಯ ಆರ್ಟಿಕಲ್ಲಿನಲ್ಲಿದೆ. ಅದರಲ್ಲಿ ಹೀಗಿದೆ:

Article 81 (*b*):

"(*b*) For the purpose of sub-clause (a), the States shall be divided, grouped or formed into territorial constituencies and the number of members to be allotted to each such constituency shall be so determined as to ensure that there shall be not less than one member for every 750,000 of the population and not more than one member for every 500,000 of the population."

ಇದನ್ನನುಸರಿಸಿ ಚುನಾವಣೆ ನಡೆಯಿತು. ಆದರೆ ಇದೇ ಸಂಬಂಧದಲ್ಲಿ ಒಂದೊಂದು ಸಂಸ್ಥಾನದ ಪ್ರಜಾಸಂಖ್ಯೆ ಎಷ್ಟೆಂಬುದನ್ನು ಕೂಡ ಪ್ರೆಸಿಡೆಂಟರ ಆರ್ಡರಿನಿಂದ ತಾತ್ಕಾಲಿಕವಾಗಿ ನಿರ್ಧಾರಮಾಡಲಾಯಿತು. ತಾತ್ಕಾಲಿಕವಾಗಿ ಏಕೆ ಮಾಡಿತೆಂದರೆ, ಆಗ್ಗೆ 1951ರ ಸೆನ್ಸಸ್ ಇನ್ನೂ ಪೂರ್ತಿಯಾಗಿರಲಿಲ್ಲ. ಈ ಸೆನ್ಸಸ್ ಲೆಕ್ಕಗಳು ಬರುವವರೆಗೂ ತಾತ್ಕಾಲಿಕವಾಗಿ ಇರಬೇಕೆಂದು ಮಾಡಿದ್ದಾಯಿತು. 1951ರ ಸೆನ್ಸಸ್ ಪೂರ್ತಿಯಾದ ಮೇಲೆ ಸರಿಯಾದ ಜನಗಣತಿಯ ವರದಿ ನಮಗೆ ಗೊತ್ತಾಗಿದೆ. ಅದಕ್ಕನುಗುಣವಾಗಿ ಈಗ ತಿದ್ದುಪಡಿ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಸೂಕ್ತ ತಿದ್ದುಪಾಟು ಮಾಡುವುದಕ್ಕೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಈ ರೀತಿಯಾದ ಒಂದು ನಿರ್ಣಯವನ್ನು ಮಂಡಿಸಲಾಯಿತು.

'In the place of sub-clause (*b*) of Clause (1) of Article 81, the proposed amendment is that instead of the figures "750,000", we should have the figures "850,000" and instead of the figures "500,000" we should have the figures "650,000".'

ಇದರ ಮೇಲೆ ಹೌಸ್ ಆಫ್ ಪೀಪಲ್ಸ್‌ನಲ್ಲೂ ಮತ್ತು ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿಯೂ ವಿಪುಲವಾದ ಚರ್ಚೆಯಾಗಿ ಆ ಸಭೆಗಳವರು ಈಗ ತಮ್ಮ ಮುಂದೆ ಇಟ್ಟಿರತಕ್ಕ ಒಂದು ನಿರ್ಣಯವನ್ನು ಪಾಸು ಮಾಡಿದರು. ಅದರಲ್ಲಿ ಹೀಗಿದೆ:

'In sub-clause (*b*) of Clause (1) of Article 81 of the Constitution, the words and figures "not less than one member for every 750,000 of the population and" shall be omitted.'

Sri A. BHEEMAPPA NAIK (Molakalmuru).—As amended, how does it read?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ರೀತಿ ತಿದ್ದುಪಡಿಯಾದಮೇಲೆ ಈ ಸೆಕ್ಷನ್ನು ಈ ರೀತಿಯಾಗಿರುತ್ತದೆ;

"(*b*) For the purpose of sub-clause (a), the States shall be divided, grouped or formed into territorial constituencies and the number of members to be allotted to each such constituency shall be so determined as to ensure that there shall be not more than one member for every 500,000 of the population."

ಇದರಲ್ಲಿ ಪ್ರಾಮುಖ್ಯವಾದ ಅಂಶ ಇಷ್ಟೇ. ಮೇಲು ಭಾಗದ ಉತ್ತಮಾಂಶವನ್ನು ಇದರಲ್ಲಿ ನಿರ್ಣಯ ಮಾಡದೆ ಇದ್ದರೂ, ಅದರ ನಿರ್ಣಯವನ್ನು ಕೂಡ ಬೇರೆ ರೀತಿಯಲ್ಲಿ ಮಾಡಬಹುದಾಗಿದೆ. ಏಕೆಂದರೆ 81 (c)ನಲ್ಲಿ

"The ratio between the number of members allotted to each territorial constituency and the population of that constituency as ascertained at the last preceding census of which the relevant figures have been published shall, so far as practicable, be the same throughout the territory of India."

ಇದರ ಅರ್ಥ ವಿವರಣೆಯನ್ನು ಸ್ವಲ್ಪಮಟ್ಟಿಗೆ ನೋಡುವುದಾದರೆ, ಈಗ ಹೌಸ್ ಆಫ್ ಪೀಪಲ್ಸ್‌ನಲ್ಲಿ 500 ಜನರಿಗಿಂತ ಜಾಸ್ತಿ ಇರಕೂಡದೆಂದು ನಿರ್ಣಯವಾಗಿದೆ. Representation of the Peoples Act ನಲ್ಲಿ 487 ಸಂಖ್ಯೆಯಷ್ಟು ಸದಸ್ಯರಿರಬೇಕೆಂದು ನಿರ್ಣಯ ಮಾಡಿದೆ. ಇವೊತ್ತಿನ ದಿವಸ ಭರತ ಖಂಡದ ಜನಸಂಖ್ಯೆ ಎಷ್ಟಿದೆಯೋ ಅದನ್ನು 487 ರಿಂದ ವಿಭಾಗ ಮಾಡಿದರೆ ಒಂದೊಂದು ಕ್ಷೇತ್ರಕ್ಕೂ ಇಷ್ಟಕ್ಕಿಂತ ಜಾಸ್ತಿಯಿರಕೂಡದೆಂದು ನಿರ್ಣಯವಾಗುತ್ತದೆ. ಇದರಿಂದ ಒಂದು ಸಂಸ್ಥಾನಕ್ಕೂ ಇನ್ನೊಂದು ಸಂಸ್ಥಾನಕ್ಕೂ ವ್ಯತ್ಯಾಸವಾಗುವುದಕ್ಕೆ ಅವಕಾಶವಿರುವುದಿಲ್ಲ. ಈ ಪ್ರಕಾರ ಉತ್ತಮಾಂಶ ನಿರ್ಣಯವಾಗುತ್ತದೆ. ಜೊತೆಗೆ ಯಾವುದೇ ಒಂದು ಸಂಖ್ಯೆಯಿಟ್ಟುಕೊಂಡರೂ ಅದನ್ನು ಅನ್ವಯಿಸುವುದಕ್ಕೆ ಕಾರ್ಯತಃ ಕಷ್ಟವಾಗುತ್ತದೆಂದು ಒಂದು minimum ನ್ನೂ ನಿರ್ಣಯಿಸಿದೆ. ಈ ಪ್ರಕಾರ ಮುಂಚೆ ಉತ್ತಮಾಂಶ 7½ ಲಕ್ಷ ಎಂದು ಹೇಳಿದುದು, ಅನಂತರ 8½ ಲಕ್ಷವೆಂದಾಗಿ ಅದೂ ಕೊನೆಗೆ ಚರ್ಚೆಯಾದಮೇಲೆ, ಈ ರೀತಿ ಮಾಡುವುದರಿಂದ ಒಂದೊಂದು ಸೆನ್ಸಸ್ಸಿಗೂ ಬದಲಾವಣೆ ಮಾಡಬೇಕಾಗುವುದರಿಂದ, ಉತ್ತಮಾಂಶವೆಂಬುದನ್ನು ತಿಳಿಯಬೇಕಾದರೆ ಒಟ್ಟು ಜನಸಂಖ್ಯೆಯನ್ನು ಇರತಕ್ಕ ಒಟ್ಟು ಸದಸ್ಯ ಸ್ಥಾನ ಸಂಖ್ಯೆಯಿಂದ ವಿಭಾಗ ಮಾಡಿದರೆ ಬರತಕ್ಕ ಅಂಶವೇ ಉತ್ತಮಾಂಶವೆಂದು ತಿಳಿದುಕೊಳ್ಳುವುದು ಸಾಧ್ಯವೆಂದು ತಿಳಿದಮೇಲೆ ಅದರಂತೆ ಸೆಲೆಕ್ಟ್ ಕಮಿಟಿಯಲ್ಲಿ ತಿದ್ದುಪಡಿ ಮಾಡಿ ಈಗ ಯಾವ ರೂಪದಲ್ಲಿ ಬಂದಿದೆಯೋ ಆ ರೀತಿ ಮಾಡಲಾಯಿತು. ಆದ್ದರಿಂದ ಇದು ಸುಲಭವಾದ ನಿರ್ಣಯ ಮತ್ತು ಉತ್ತಮವಾದ ನಿರ್ಣಯ. ಈ ಒಂದು ಮಾರ್ಗವನ್ನನುಸರಿಸಿರುವುದರಿಂದ ಈ ವಿಚಾರ ಆಗಾಗ್ಗೆ ಪಾರ್ಲಿಮೆಂಟಿನ ಮುಂದಾಗಲಿ ಇಲ್ಲಾಗಲಿ ಬರುವುದಕ್ಕೆ ಅವಕಾಶವಿಲ್ಲದಂತೆ ಸರಿಪಡಿಸಿದೆ.

ಇನ್ನು, ಈ ನಿರ್ಣಯ ನಮ್ಮ ಮುಂದೆ ಬರುವುದಕ್ಕೆ ಕಾರಣವೇನೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಇಂಥ ಒಂದು ಅವಕಾಶ ಸಂಸ್ಥಾನಗಳಿಗಿರತಕ್ಕದು ಬಹು ಮುಖ್ಯವಾದುದು. ನಮ್ಮ ರಾಜ್ಯಾಂಗ ರಚನೆಗೆ ಸಂಬಂಧಪಟ್ಟ ಹಾಗೆ ಯಾವ ನಿರ್ಣಯವನ್ನು ಮಾಡಬೇಕಾದರೂ ಪಾರ್ಲಿಮೆಂಟಿಗೆ ಮಾತ್ರ ಅಧಿಕಾರವಿರುವುದಲ್ಲದೆ ಪ್ರತಿಯೊಂದು ಸ್ಟೇಟ್ ಅಸೆಂಬ್ಲಿಗೂ ಅದನ್ನು ಕೊಟ್ಟಿರುವುದು ಒಂದು ಗಮನಾರ್ಹವಾದ ವಿಚಾರ. ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ ಕಾನ್‌ಸ್ಟಿಟ್ಯೂಷನನ್ನು ರಚನೆ ಮಾಡಿದಮೇಲೆ, ಅದನ್ನು ಬದಲಾವಣೆ ಮಾಡುವುದರಲ್ಲಿ ಸ್ಟೇಟ್ಸಿನ ಶಾಸನ ಸಭೆಗಳಿಂದಲೂ ಓಟಿನ ಮುಖಾಂತರ ಅಭಿಮತ ಪಡೆದು ಮಾಡಬೇಕೆಂದೂ ಸಂಸ್ಥಾನಗಳ ಭಾಗವೂ ಇದರಲ್ಲಿ ಇರಬೇಕೆಂದೂ ರಾಜ್ಯಾಂಗದ 368ನೆಯ ಆರ್ಟಿಕಲ್ಲಿನಲ್ಲಿ ಹೇಳಿದೆ. ಆ ಆರ್ಟಿಕಲ್ಲಿನಲ್ಲಿ ಈ ರೀತಿ ಹೇಳಿದೆ.

"An amendment of this Constitution may be initiated only by the introduction of a Bill for the purpose in either House of Parliament, and when the Bill is passed in each House by a majority of the total membership of that House and by a majority of not less than two-thirds of the members of that House present and voting, it shall be presented to the President for his assent and upon such assent being given to the Bill, the Constitution shall stand amended in accordance with the terms of the Bill :

"Provided that if such amendment seeks to make any change in—

(*a*) article 54, article 55, article 73, article 162 or article 241,

(*b*) Chapter IV of Part V, Chapter V of Part VI, or Chapter I of Part XI, or

(*c*) any of the Lists in the Seventh Schedule, or

(*d*) the representation of States in Parliament, or

(*e*) the provisions of this article, ..."

"Representation of States in Parliament." ಎನ್ನುವುದು ಇದರಲ್ಲಿ ಒಳಗೊಂಡಿರುವುದರಿಂದ ಮೈಸೂರು ಸಂಸ್ಥಾನಕ್ಕೆ ಪ್ರಾತಿನಿಧ್ಯವೆಷ್ಟು ಎಂಬುದನ್ನು ನಿರ್ಧಾರ ಮಾಡುವಾಗ ಇದು ನಮ್ಮ ಅಸೆಂಬ್ಲಿ ಮತ್ತು ಕೌನ್ಸಿಲ್ ಮುಂದೆ ಬರುವುದು ನ್ಯಾಯವಾಗಿದೆ.

". . .the amendment shall also require to be ratified by the Legislatures of not less than one half of the States specified in Parts A and B of the First Schedule by resolutions to that effect passed by those Legislatures before the Bill making provision for such amendment is presented to the President for assent."

Sri K. PATTABHIRAMAN (Kolar).—I seek a clarification from the Hon'ble Minister. The motion that is now before us for consideration is in two parts, one with reference to the composition of the House of the People and another with reference to the composition of the Legislature

(Sri K. PATTABHIRAMAN.)

or the Assembly. Now, are we competent to make any amendment, any suggestion, in respect of the first part or merely hear what has been decided so far as composition of the House of People is concerned, but express our ratification or with-hold it in respect of the Legislative Assembly? What is the scope of the motion, I would like to know.

Sri A. G. RAMACHANDRA RAO.—This motion is a ratification motion.

Sri K. PATTABHIRAMAN.—Of what part?

Sri A. G. RAMACHANDRA RAO.—I have indicated that also in my main resolution that has been passed by the Houses of Parliament, *i.e.*, the House of the People and the Council of States. The amendment of Article 81 reads 'In sub-clause (*b*) of clause (1) of article 81 of the Constitution, the words and figures "not less than one member for every 750,000 of the population and" shall be omitted.' That is the restriction.

Sri K. PATTABHIRAMAN.—That is, so far as the Assembly is concerned.

Sri A. G. RAMACHANDRA RAO.—So far as representation in the House of the People is concerned. Other parts are not before us. Perhaps, as a consequential measure, they may come before us.

Sri P. R. RAMAIYA (Basavangudi).—From the proceedings in the Parliament, it is clear that no difficulty would arise with regard to the State Assemblies, because the upper limit is 500 for State Assemblies and no such difficulty would arise as in the case of the Parliament. In the Parliament, the number of seats is limited to five hundred. Since it is very necessary to restrict the number of seats in the Parliament, a lower limit was considered. But subsequently, the Select Committee removed the upper limit and only the lower limit was retained. I therefore submit that no difficulty would arise in the case of the State Assemblies.

Sri A. G. RAMACHANDRA RAO.—Whatever the reason, that is not before the Hon'ble House at present.

ಆದುದರಿಂದ ರಾಜ್ಯಾಂಗದ 368ನೆಯ ವಿಧಿಯ ಪ್ರಕಾರ ಅಂಗರಚನೆಗೆ ಏನೇ ತಿದ್ದುಪಡಿಯಾದರೂ ಕೂಡ, ಪಾರ್ಲಿಮೆಂಟಿನಲ್ಲಿ, ಹೌಸ್ ಆಫ್ ದಿ ಪೀಪಲ್ಸ್ ಮತ್ತು ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿ ಒಪ್ಪಿಗೆಯಾದ ಮೇಲೆ ಅದನ್ನು ಭರತಖಂಡದ ಎಲ್ಲಾ ಸಂಸ್ಥಾನಗಳಿಗೂ ಕಳುಹಿಸಿ, ಅದಕ್ಕೆ ಅರ್ಧ ಭಾಗಕ್ಕಿಂತ ಹೆಚ್ಚು ಸಂಸ್ಥಾನಗಳು ಒಪ್ಪಿಗೆ ಕೊಟ್ಟರೆ ಮಾತ್ರ ಪ್ರೆಸಿಡೆಂಟರು ಅಂಗೀಕಾರ ಕೊಡತಕ್ಕದ್ದು, ಹೀಗೆ ಅಂಗೀಕಾರವಾದ ಮೇಲೆ ಅದು ಕಾನೂನಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ. ಇದರಂತೆ ಈ ತಿದ್ದುಪಡಿ ಹೌಸ್ ಆಫ್ ದಿ ಪೀಪಲ್ಸ್ ಮತ್ತು ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿ ಅಂಗೀಕಾರವಾಗಿದೆ. ಇದನ್ನು ಎಲ್ಲ ಸಂಸ್ಥಾನಗಳಿಗೂ ಕಳುಹಿಸಿದ್ದಾರೆ. ಅದರಂತೆ ನಮಗೂ ಬಂದಿದೆ. ಇದನ್ನು ಈಗಾಗಲೇ ನಮ್ಮ ವಿಧಾನ ಪರಿಷತ್ತಿನ ಮುಂದಿಟ್ಟಿತ್ತು; ಅವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಈಗ ನಮ್ಮ ಅಂಗರಚನೆಯ ತಿದ್ದುಪಡಿಯ ಅಧಿಕಾರವನ್ನು ಕೂಡ ನಮಗೆ ಕೊಟ್ಟಿರುವುದು ಮುಖ್ಯ. ಈ ಪವಿತ್ರ ಕರ್ತವ್ಯವನ್ನು ನೆರವೇರಿಸುವ ಮೊದಲನೆಯ ಸಂದರ್ಭದಲ್ಲಿ ಈ ರಾಜ್ಯಾಂಗವನ್ನು ಎಷ್ಟುಮಟ್ಟಿಗೆ ನಮ್ಮದು ಎಂದು ಕೊಳ್ಳಬೇಕು, ಎಂಥ ಪವಿತ್ರ ಕಾರ್ಯವನ್ನು ಮಾಡುತ್ತಿದ್ದೇವೆ ಎಂಬುದನ್ನು ಹೇಳಬೇಕಾಗಿಲ್ಲ. ಯಾವ ಭಕ್ತಿಪೂರ್ವಕವಾದ ತಿಳಿವಳಿಕೆ ಇರಬೇಕೋ ಅದು ನಮ್ಮಲ್ಲಿದೆ ಎಂದು ನಂಬಿದ್ದೇನೆ.

ನಮಗೆ ಬಂದಿರುವ ಸಮಾಚಾರದ ಪ್ರಕಾರ ಈ ನಿರ್ಣಯಕ್ಕೆ ತಿರುವಾಂಕೂರು-ಕೊಚ್ಚಿ ಸಂಸ್ಥಾನ ಒಪ್ಪಿಗೆ ಕೊಟ್ಟಿಲ್ಲ; ಬಾಕಿ ಎಲ್ಲಾ ಸಂಸ್ಥಾನಗಳವರೂ ಒಪ್ಪಿದ್ದಾರೆಂದು ತಿಳಿದು ಬಂದಿದೆ. ನಮ್ಮ ಸಂಸ್ಥಾನದ ವಿಚಾರವನ್ನು ನೋಡಿದರೆ, ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಯಾವ ಯಾವ ಸಂಸ್ಥಾನಕ್ಕೆ ಯಾವ ಯಾವ ರೀತಿ ಬದಲಾವಣೆಯಾಗಬಹುದೆಂದು ತಿಳಿಸಿದ್ದಾರೆ. ಭಾರತ ಸರ್ಕಾರದ ನ್ಯಾಯಾಂಗ ಮಂತ್ರಿಗಳಾದ ಶ್ರೀ ಬಿಸ್‌ವಾಸ್‌ರವರು ಈ ರೀತಿ ತಿಳಿಸಿದ್ದಾರೆ.

In the fourth page of the book 'The Constitution (Second Amendment) Bill, 1952'—Parliamentary Proceedings' Mr. Biswas, the Minister of Law and Minority Affairs, says:

> 'I shall repeat what I said earlier. Bombay will have three additional seats, while Madras and Mysore will have two additional seats each, and Uttar Pradesh will have two less, while Bihar, Madhya Pradesh, Punjab and West Bengal will have one less each. In nine States the figures will remain unaltered.'

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ನಮಗೆ ಎರಡು ಸ್ಥಾನಗಳು ಹೆಚ್ಚಾಗಿ ಬರುತ್ತವೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಯೋಚನೆಮಾಡಿದಂತೆ ಒಂದು ಸ್ಥಾನ ಹೆಚ್ಚು ಬರುತ್ತದೆಂದು ಕಾಣುತ್ತದೆ.

Sri K. PATTABHIRAMAN.—Without this amendment, if the present law is operated, as a result of the new census, what would have been the ratio apportioned to Mysore?

Sri A. G. RAMACHANDRA RAO.—That also I have calculated.

ಭಾರತದ ಜನಸಂಖ್ಯೆ 347 ಮಿಲಿಯನ್ ಇದ್ದುದು 1951ನೆಯ ಸೆನ್ಸಸ್ ಪ್ರಕಾರ 361 ಮಿಲಿಯನ್ ಆಗಿದೆ. ಇದರ ಪ್ರಕಾರ 7·26 ಲಕ್ಷಕ್ಕೆ ಒಂದು ಪ್ರಾತಿನಿಧ್ಯ ಸಿಕ್ಕುತ್ತದೆ. ನಮ್ಮ ಸಂಸ್ಥಾನದ ಈ ಹೊತ್ತಿನ ಜನಸಂಖ್ಯೆ 1951ನೆಯ ಸೆನ್ಸಸ್ ಪ್ರಕಾರ 90·71 ಲಕ್ಷವಿದೆ. 90·71÷7·26, ಎಂದರೆ ಸುಮಾರು 13 ಸ್ಥಾನ ನಮಗೆ ಬರಲು ಅವಕಾಶವಿದೆ. 12 ಅಂತೂ ಖಂಡಿತ ಬರುತ್ತವೆ. ಆದುದರಿಂದ ಈಗ ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗಿ ನನ್ನ ವಿಧಾನ ಪರಿಷತ್ತಿನಲ್ಲಿ ಒಪ್ಪಿಗೆಯಾಗಿರುವ ಸೂಚನೆ ಅಂಗೀಕಾರ ಯೋಗ್ಯವಾಗಿದೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

Mr. SPEAKER.—Resolution moved :

"That this House ratifies the amendment of Article 81 of the Constitution proposed to be made by the Constitution (Second Amendment) Bill, 1952, as proprosed by the two Houses of Parliament."

*ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ಲಾ ಮಿನಿಸ್ಟರವರು ಈ ವಿಷಯವನ್ನು ಬಹಳ ಭಕ್ತಿಪೂರ್ವಕವಾಗಿ ಪರಿಶೀಲನೆ ಮಾಡಬೇಕು, ಯೋಚನೆಮಾಡಬೇಕು ಎಂದು ಅಪ್ಪಣೆ ಕೊಟ್ಟಿದ್ದಾರೆ. ಭಾರತ ರಾಜ್ಯಾಂಗವನ್ನು ಯೋಚನೆ ಮಾಡುತ್ತಿರುವಾಗ ನಾವು ಯಾವಾಗಲೂ ಭಕ್ತಿಪೂರ್ವಕವಾಗಿಯೇ ಮಾಡುತ್ತಿರುವುದು. ಪವಿತ್ರ ಕಾರ್ಯ ಎಂದು ಹೇಳಿದರು ; ನಿಜವಾಗಿಯೂ ಪವಿತ್ರಕಾರ್ಯವೇ. ಆ ದೃಷ್ಟಿಯಿಂದಲೇ ನಾವು ಯೋಚನೆಮಾಡುವುದು. ಮುಖ್ಯವಾಗಿ, ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ, ಅದರಲ್ಲಿ ಭಾಗವಹಿಸುವ ಸದಸ್ಯರ ಕೆಲಸ ಸುಲಭವಾಗಿರಬೇಕು, ಸುಲಲಿತವಾಗಿ ನಡೆಯುತ್ತಿರಬೇಕು, ಹೆಚ್ಚು ಕಾಠಿಣ್ಯಕ್ಕೂ ಪ್ರಮಾದಕ್ಕೂ ಈಡಾಗಬಾರದು. ಸಚಿವರು ಇದು ಬಹಳ ಸುಲಭವಾದ ಮತ್ತು ಉತ್ತಮವಾದ ತಿದ್ದುಪಡಿ ಎಂದು ಹೇಳಿದರು. ಉತ್ತಮ ಹೌದೋ ಅಲ್ಲವೋ ನಾನು ಹೇಳಲಾರೆ, ಆದರೆ ಸುಲಭವಲ್ಲ, ಬಹಳ ಕಷ್ಟವಾದುದು. ಪ್ರಪಂಚದಲ್ಲಿ ಇನ್ನೆಲ್ಲೂ ಇಲ್ಲದೇಯಿರುವ ರಾಜ್ಯಾಂಗ ವಿಭಜನೆ ನಮ್ಮಲ್ಲಿದೆ. ಯಾವ ದೇಶದಲ್ಲಿಯೂ ಇಷ್ಟು ದೊಡ್ಡ ಚುನಾವಣಾ ಕ್ಷೇತ್ರವಿಲ್ಲ. ಯಾವ ದೇಶದಲ್ಲಿಯೂ ಇಷ್ಟು ಜನಸಂಖ್ಯೆಯುಳ್ಳ ಕ್ಷೇತ್ರವಿಲ್ಲ. ಇಂಗ್ಲೆಂಡಿನಲ್ಲಿ 660 ಪ್ರತಿನಿಧಿಗಳಿದ್ದಾರೆ, 50 ಸಾವಿರ ಜನಸಂಖ್ಯೆಗಿಂತ ಹೆಚ್ಚಿರುವ ಚುನಾವಣಾ ಕ್ಷೇತ್ರವಿಲ್ಲ. ಇದೇ ರೀತಿ ಅಮೇರಿಕಾದಲ್ಲಿಯೂ ಇಷ್ಟು ದೊಡ್ಡ ಕ್ಷೇತ್ರವಿರುವುದಿಲ್ಲ.

What I am saying is— in India we have got the biggest constituencies with the largest number of voters. We do not find such big constituencies with so huge a population anywhere else, in any other country in the world. That is because of the vastness of the country. Sir, for democracy to work well and efficiently and to see that its objects are fulfilled, I think, in my humble opinion, it is quite necessary that these elections must be within the reach of even an ordinary man, a common man. It should not be of such a herculean nature or so difficult or so enormous as to discourage a person who may be very efficient, and very honest, but on account of the prevailing or existing circumstances and on account of the herculean efforts and enormous expenditure involved, he may be discouraged from standing for election. Recently all of us have faced elections. You know how difficult it has been, and I am sure people who have faced elections and those who have taken part in elections, I do not think, will undergo a similar ordeal once again.

Now, as it is, the Constitution is proposed to be amended raising the strength from 750,000 to 850,000 on the ground that there has been an increase in population by ten per cent. But the same thing will happen every ten years. After ten years, there will be an increase in population by ten per cent or even more. So, following this precedent, you will have to go on increasing the constituencies by ten per cent. So, in the course of another ten or twenty years, you will have to face an electorate of more than a million. I submit that this will be a great hindrance in the way of the proper and smooth working of democracy. Just imagine. Is it

* Asterisk indicates that the speech has not been revised by the Member concerned.

(SRI J. MOHAMED IMAM.)

possible for an ordinary candidate with all the qualifications to face an election in a big territorial area and with such a huge number which is likely to go up year by year. The Parliament proposed to restrict the maximum number to five hundred; because they have to adhere to this, therefore, it is inevitable for them to go on increasing the strength of the electorate. If this principle is adopted, in the course of thirty years every constituency will become as big as an ordinary state itself.

Sri A. BHEEMAPPA NAIK.—The area will not extend. It is only the population.

Sri J. MOHAMED IMAM.—The population will be as big as you can find in a small State in India—with a population of five to six lakhs.

Sri A. G. RAMACHANDRA RAO.—Suggest a solution.

Sri J. MOHAMED IMAM.—There are two solutions. I hope all the members have realised the present difficulties. This one does not conduce to the proper working of democracy. It will create a sort of fascism in the State inasmuch as only people with plenty and pots of money can face elections. Or again some parties with good backing can have their way on account of party power. Minorities and other people have absolutely no chance.

Sri K. PATTABHIRAMAN.—And, independents!

10 A.M.

Sri J. MOHAMED IMAM.—However eminent they may be, however learned they may be, however patriotic they may be, there is absolutely no chance for independents, minorities and other persons to face elections. It will become the monopoly of the monied people, or of the people who have joined organised parties or of the people who are guided by the party in power. You know the handicaps we are having from the party in power. They are going to have their own way and they are in a special and advantageous position. That is why I say that the present mode will develop a sort of fascism and dictatorial Government. Democracy will not have its place. Democracy must assure representation to all people, to all sections and to people of all opinions. Under this arrangement, minorities and the disinterested people and the people with qualification and merit will have no chance and the people who have got a fascist tendency will get in. I am sure that if this mode is adopted, the future policy of democracy will fail and fascism will come in. There are two solutions. One is to increase the number of members in the Parliament. For that the objection will be that the number will be become unwieldy and that it cannot function properly. But we have the analogy of British Parliament. For such a small country with a population of 50,000,000 they have got 640 members. For a big country like India which is, I think, six times bigger than England, naturally we must have 3,000 members which, I think, will be very unwieldy in number. I think, taking all these things into consideration, though it may be a bad precedent, the number in the Parliament may go up to 1,000. Make the Parliament Hall as small as this Hall. Only a few can sit and the others will be spending their time in the lounge. If that is not possible, then I sumbit that the whole structure should be changed. If this policy has to be adopted, if this policy has to be pursued, for every ten years the population will go on increasing and it will be a herculean affair for an ordinary man to face elections if you keep the number rigid. I think, the whole structure has to be changed. I think, we have to adopt some other form of election—whether it should be an indirect form of election or whether the constitution must be of a federal type ....

Mr. SPEAKER.—The Leader of the Opposition Party ought to have

pleaded this in the House of the People.

Sri J. MOHAMED IMAM.—This huge constituency has kept me back. If the constituency had been reasonably small I would have faced the election. If it is a huge constituency, it will not be possible for a man like me to face elections.

I think the whole Constitution has to be reviewed in the interests of the country and in the interests of democracy. From the beginning, the idea was to have a federal type of Government for the whole of India, because India is a vast country, I suppose, as big as a Continent. It was thought seriously that we should have a federal type of Government giving all residuary powers to the States. Now the Centre thought it fit to centralise and have almost all important powers vested in them. I can state without fear of contradiction that there is too much of centralisation. On account of over-centralisation, the States have suffered, particularly in the field of finance. I submit that, taking the present difficulties into consideration, the whole thing has to be reviewed and some other form of election or some other type of Constitution has to be thought of. I am sure and I am quite confident that in course of time the people will realise, the members will realise and the candidates will realise the urgent necessity of bringing about this reform. So I submit that we cannot agree to the proposed amendment because it will have the effect of defeating the purpose of democracy and it will create fascism in the country. If democracy has to function properly, the whole thing has to be reviewed. We have to devise some other form of election and see whether in a country like ours it is not worthwhile to adopt a federal type of Constitution which will be eminently suited to India.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಮಾನ್ಯ ಮಂತ್ರಿಗಳು ಕೆಲವು ವಿವರಗಳನ್ನು ಕೊಡುತ್ತ, ಈಗ ಮಾಡಿರತಕ್ಕದ್ದು ಹಿಂದಿನ ಸೆನ್ಸಸ್ ಲೆಕ್ಕದ ಪ್ರಕಾರ ಸದಸ್ಯರ ಸಂಖ್ಯೆಯನ್ನು ನಿಗದಿಮಾಡಿರುತ್ತದೆಂದೂ, ಈ ದಿನ 1951ನೆಯ ಸೆನ್ಸಸ್ ಲೆಕ್ಕಗಳ ಪ್ರಕಾರ ನಮ್ಮ ಸಂಸ್ಥಾನಕ್ಕೆ ಇನ್ನೂ ಒಂದೆರಡು ಸ್ಥಾನಗಳು ದೊರೆಯಬಹುದೆಂದೂ ತಿಳಿಸಿದ್ದಾರೆ. ಆದರೆ ಈಗ ನಮ್ಮ ನೆರೆ ಪ್ರಾಂತವಾದ ಬಳ್ಳಾರಿ ಮತ್ತು ಇತರ ಪ್ರಾಂತಗಳು ನಮ್ಮ ಮೈಸೂರಿಗೆ ಸೇರಿಕೊಂಡರೆ ಆಗ ನಮ್ಮ ಸಂಸ್ಥಾನದ ಕೋಟಾ ಹೆಚ್ಚಿಸತಕ್ಕದ್ದನ್ನು ಗಣನೆಗೆ ತೆಗೆದುಕೊಳ್ಳುತ್ತಾರೋ ಹೇಗೆ ಎಂಬ ಒಂದು ವಿಚಾರ ತಿಳಿದುಕೊಳ್ಳಬೇಕಾಗಿತ್ತು.

Sri A. G. RAMACHANDRA RAO.—It is inevitable.

ಶ್ರೀ ಕೆ. ಪಟ್ಟಾಭಿರಾಮನ್.—ಮಾನ್ಯ ಸಭಾಪತಿಗಳೇ, ಈಗ ಈ ಸಭೆಯಮುಂದೆ ಚರ್ಚೆಯಾಗುವ ವಿಷಯದ ಬಗ್ಗೆ ಒಂದು ಆಸಕ್ತಿ ತಮ್ಮೆಲ್ಲರಲ್ಲಿಯೂ ಹುಟ್ಟಲಿ ಮತ್ತು ಮಾನ್ಯ ಮಂತ್ರಿಗಳಲ್ಲಿಯೂ ಸಹ ಅಂಥ ಭಾವನೆ ಹುಟ್ಟಲೆಂದು ನಾನು ಪ್ರಾರ್ಥನೆಮಾಡುತ್ತೇನೆ. ಇದು ಕೇವಲ ಒಂದು ಪಾರ್ಟಿಯ ದೃಷ್ಟಿಯಿಂದ ನೋಡತಕ್ಕಂಥ ಸಮಸ್ಯೆಯಲ್ಲ. ಪ್ರಾಯಶಃ ಇಲ್ಲಿ ನಡೆಯತಕ್ಕ ಚರ್ಚೆಗಳಿಂದ ತಮ್ಮೆಲ್ಲರ ಮನಸ್ಸಿನ ಮೇಲೆಯೂ ಒಂದು ಪರಿಣಾಮ ಉಂಟಾದರೆ ಅಥವಾ ಉಂಟಾಗುವ ಒಂದು ಸಂದರ್ಭ ಬರುವುದಾದರೆ ಆಗಲಾದರೂ ಈ ನಿರ್ಣಯವನ್ನು ಮಂಡಿಸಿದಂಥ ಮಾನ್ಯ ಮಂತ್ರಿಗಳ ಮನಸ್ಸಿನಲ್ಲೂ ಒಂದು ಪರಿಣಾಮಕಾರಿಯಾದಂಥ ಬದಲಾವಣೆಯುಂಟಾಗಿ, ಅವರು ಈ ನಿರ್ಣಯವನ್ನು ಸರಿಯಾದ ರೀತಿಯಲ್ಲಿ ತಿದ್ದುಪಡಿಮಾಡುವುದಕ್ಕೆ ಸಿದ್ಧರಾಗಬಹುದು. ಇದು ಅಷ್ಟು ಪ್ರಾಮುಖ್ಯವಾದ ವಿಚಾರವಾಗಿರುತ್ತದೆಂದು ನಾನು ತಮ್ಮೆಲ್ಲರಲ್ಲಿಯೂ ಸವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ಸಂಬಂಧದಲ್ಲಿ ನಾನು ಒಂದು ಅಂಶವನ್ನು ಎಲ್ಲ ಮಾನ್ಯ ಸದಸ್ಯರಿಗೂ ಒತ್ತಿ ಹೇಳಬೇಕಾಗಿದೆ. ಪ್ರಾಯಶಃ ನಮಗೆ ಇಂಥ ಒಂದು ಅವಕಾಶ ಸಿಕ್ಕುವುದು ದುರ್ಲಭ ಮತ್ತು ಬಹಳ ಅಪರೂಪ. ನಮ್ಮ ಕಾನ್‌ಸ್ಟಿಟ್ಯೂಷನ್ ಅಥವಾ ರಾಜ್ಯಾಂಗದ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಆಯಾ ಶಾಸನಸಭೆಗಳಿಗೆ ಇಂಥಾ ಅವಕಾಶ ದೊರೆಯುವುದೇ ಬಹಳ ದುರ್ಲಭ. ಇಂಥ ಒಂದು ಸದವಕಾಶ ಪ್ರಾಯಶಃ ಒಂದಾವರ್ತಿ ಸಿಕ್ಕತಕ್ಕದ್ದೇ ಬಹಳ ಹೆಚ್ಚು. ಹೀಗೆ ತಾನಾಗಿಯೇ ಬಂದಿರತಕ್ಕಂಥ ಈ ಒಂದು ಸದವಕಾಶವನ್ನು ಒಮ್ಮೆ ನಾವು ಕಳೆದುಕೊಂಡರೆ ಮತ್ತೊಮ್ಮೆ ಇಂಥ ಅವಕಾಶ ನಮಗೆ ಸಿಕ್ಕಲಾರದು. ಎಂದರೆ, ರಾಜ್ಯಾಂಗದ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕಂಥ ಅವಕಾಶ ದೊರೆಯಲಾರದು. ಈ ಒಂದು ಜವಾಬ್ದಾರಿಯುತವಾದ ದೃಷ್ಟಿಯಿಂದ ನಾವು ಇದನ್ನು ಒಂದು ಪರಿಣಾಮಕಾರಿಯಾದ ರೂಪದಲ್ಲಿ ಚರ್ಚೆಮಾಡಬೇಕಾಗಿದೆಯೆಂದು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತಿದ್ದೇನೆ.

ಈಗ ನಮ್ಮ ಮುಂದೆ ನಡೆಯುತ್ತಿರುವ ಚರ್ಚೆಯಲ್ಲಿ ಎರಡು ಮುಖ್ಯವಾದ ವಿಚಾರಗಳಿರುತ್ತವೆ. ಅವುಗಳೇನೆಂಬುದನ್ನು ಮಾನ್ಯ ಸಭೆಯವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ಪಾರ್ಲಿಮೆಂಟಿನ ಸದಸ್ಯರ ಸಂಖ್ಯೆ 500ಕ್ಕಿಂತಲೂ ಜಾಸ್ತಿ ಇರಬಾರದು ಎಂಬ ಒಂದು ಕಟ್ಟು ಅಥವಾ ಒಂದು ನಿಯಮವನ್ನೇಕೆ ಹಾಕಿಕೊಂಡಿದ್ದಾರೆ. ಜನಬಾಹುಳ್ಯವಾದರೆ ಅಥವಾ ಜನಗಣತಿಯಿಂದ ಜನಸಂಖ್ಯೆ ಜಾಸ್ತಿಯಾದರೆ, ಆಗಲೂ ಸಹ ಯಾವ ಒಂದು ಸಂದರ್ಭದಲ್ಲಿಯೂ ಈ ಪಾರ್ಲಿಮೆಂಟ್ ಒಟ್ಟು ಸದಸ್ಯರ ಸಂಖ್ಯೆ 500ಕ್ಕಿಂತ ಜಾಸ್ತಿ ಇರಲೇಕೂಡದು ಎಂದು ಅವರು ಹೇಳಿರತಕ್ಕ

(ಶ್ರೀ ಕೆ. ಪಟ್ಟಾಭಿರಾಮ್)

ನಿರ್ಬಂಧವನ್ನು ನಾವು ಈಗ ಒಪ್ಪಿಕೊಳ್ಳಬೇಕಾ ಎಂಬುದು ಒಂದು ಅಂಶ; ಇದನ್ನು ನಾನೀಗ ತಮ್ಮ ತಮ್ಮ ಮುಂದೆ ಇಡುತ್ತೇನೆ.

ನಾವು 1941ರಲ್ಲಿದ್ದ ಜನಗಣನೆಯನ್ನೂ ಮತ್ತು 1951ರಲ್ಲಿರತಕ್ಕ ಜನಗಣನೆಯನ್ನೂ ನೋಡಿದರೆ, ಸುಮಾರು ಒಂದು ಸರ್ವಸಾಮಾನ್ಯ ರೀತಿಯಲ್ಲಿ ಇಂಡಿಯಾ ದೇಶದ ಜನಸಂಖ್ಯೆ ಶೇಕಡ ಹತ್ತರಷ್ಟು ಜಾಸ್ತಿಯಾಗಿದೆಯೆಂದು ಹೇಳಬಹುದು. ಹೀಗೆ ಶೇಕಡ 10 ರಂತೆ ಹತ್ತು ವರ್ಷಗಳಿಗೊಮ್ಮೆ ಜನಗಣತಿಯ ಪ್ರಕಾರ ಜನಸಂಖ್ಯೆ ಹೆಚ್ಚಾಗುತ್ತಾ ಹೋದರೆ ಆಗಲೂ ಕೂಡ 500 ಜನ ಸದಸ್ಯರಿಗಿಂತಲೂ ಹೆಚ್ಚಾಗಬಾರದೆಂದು ಹಾಕಿಕೊಂಡಿರುವ ಆ ಮೇಲಿನ ಮಟ್ಟದ ನಿರ್ಬಂಧದ ಪ್ರಕಾರ, ನಾವು 7½ ಲಕ್ಷಕ್ಕೆ ಒಬ್ಬ ಪ್ರತಿನಿಧಿಯಂತೆಯೂ ಕಳುಹಿಸಬೇಕಾಗಿದೆ. ಪುನಃ ಇದೇ ರೀತಿ 1951ರಲ್ಲಿ ಜನಗಣತಿಯ ಪ್ರಕಾರ ಜನಸಂಖ್ಯೆ ಎಷ್ಟೇ ಹೆಚ್ಚಾಗಲಿ ಆಗಲೂ ಕೂಡ, ನಾವು ಈ ಮೇಲಿನ ಮಟ್ಟಕ್ಕೆ ವ್ಯತ್ಯಾಸ ಆಗದಂತೆ ನೋಡಿಕೊಳ್ಳಲು ಜನಸಂಖ್ಯೆ 12½ ಲಕ್ಷಕ್ಕೆ ಏರಿದ್ದರೂ ಸಹ ಒಬ್ಬ ಪ್ರತಿನಿಧಿಯನ್ನು ಮಾತ್ರವೇ ಕಳುಹಿಸಬೇಕಾಗಿರುತ್ತದೆ. ಹೀಗೆ ಜನಸಂಖ್ಯೆ ವರ್ಷೇ ವರ್ಷೇ ಏರುತ್ತಾ ಹೋದಹಾಗೆಲ್ಲಾ ಆ ಮೇಲಿನ ಮಟ್ಟ ಮಾತ್ರ ಬದಲಾಯಿಸಬಾರದೆಂದು ಮಾಡಿರುವಂಥದು ಎರಡನೆಯ ವಿಚಾರ. ಅದೇನು ಸಿದ್ಧಾಂತ? ಅದೇನು ವ್ಯವಸ್ಥೆ? ಹೀಗೆ ಮಾಡುತ್ತ ಹೋಗುವುದರಿಂದ ಮುಂದೇನು ಅಚಾತುರ್ಯಗಳು ನಡೆಯಬಹುದು ಎಂಬುದನ್ನು ನಾವು ಸ್ವಲ್ಪ ಗಮನಿಸಬೇಕಾಗಿದೆ

ಈ ಪ್ರಜಾಸತ್ತಾತ್ಮಕ ರಾಜ್ಯವೆಂಬುದನ್ನು ತಾವೇನು ಇಂಗ್ಲೀಷಿನಲ್ಲಿ ಒಂದು 'ಡೆಮಾಕ್ರೆಸಿ' ಎಂದು ಹೇಳುತ್ತೀರೋ ಅಂಥ ಒಂದು ಡೆಮಾಕ್ರೆಸಿಯ ಧೋರಣೆ ಏನಿದೆಯೆಂಬುದನ್ನು ತಾವು ಸ್ವಲ್ಪ ಯೋಚನೆಮಾಡಬೇಕು. ಆ ಮೇಲುಮಟ್ಟವನ್ನು ತಾವು ಈ ದಿವಸ 500ಕ್ಕೆ ಇಟ್ಟುಕೊಳ್ಳಬೇಕೆಂದು ಹೇಳುವುದಾದರೆ ಮುಂದೆ 10 ಲಕ್ಷ 15 ಲಕ್ಷಕ್ಕೆ ಒಬ್ಬ ಪ್ರತಿನಿಧಿ ಇರಬೇಕಾಗುತ್ತದೆ. ಆಗ ಏನಾಗುತ್ತದೆ ಎಂಬುದನ್ನು ಈ ಡೆಮಾಕ್ರೆಸಿಯ ಮೂಲತತ್ತ್ವ ರೀತ್ಯಾ ತಾವು ನೋಡಬೇಕು. ಈಗ ಪ್ರತಿನಿಧಿಯಾಗುವ ಮನುಷ್ಯನಿಗೂ ಮತ್ತು ಆತನು ಪ್ರತಿನಿಧಿಸುವ ಜನರಿಗೂ ಒಂದು ನಿಕಟ ಸಂಪರ್ಕ ಮತ್ತು ಒಂದು ಜವಾಬ್ದಾರಿ ಇರಬೇಕಾಗುತ್ತದೆ, ಇದೇ ಡೆಮಾಕ್ರೆಸಿಯ ಮೂಲ ತತ್ವ. ಹೀಗೆ ಈ ಡೆಮಾಕ್ರೆಸಿಯ ಮೂಲ ತತ್ವಗಳಿಗೆ ಆಧಾರಭೂತವಾದ ಒಂದು ನಿಕಟಸಂಬಂಧ ಅಥವಾ ನಿಕಟ ಸಂಪರ್ಕಗಳು ಚುನಾಯಿಸಲ್ಪಡುವ ಮನುಷ್ಯನಿಗೂ ಮತ್ತು ಚುನಾಯಿಸತಕ್ಕ ಜನರಿಗೂ ಇರಬೇಕೆಂದು ಹೇಳುತ್ತಿರುವಾಗ, ಈ ಚುನಾವಣೆ ಕ್ಷೇತ್ರ 15–20 ಲಕ್ಷ ಜನಗಳನ್ನೊಳಗೊಂಡು, ಅಷ್ಟು ವಿಶಾಲವಾಗುತ್ತಾ ಹೋದರೆ ಆ ನಿಕಟ ಸಂಬಂಧವೂ ಮತ್ತು ಬಾಂಧವ್ಯವೂ ಈಗಿನಂತೆ ಇರಲಾರವು, ಇರಲಿಕ್ಕೂ ಅವಕಾಶವಿಲ್ಲ. ಆಗ ಡೆಮಾಕ್ರೆಸಿಯೂ ಕುಸಿದು ಬಿದ್ದುಹೋಗುತ್ತದೆ, ಈ ಪ್ರಜಾಸರ್ಕಾರದ ಚೌಕಟ್ಟು ಕಳಚಿ ಹೋಗುತ್ತದೆ. ಇದನ್ನು ತಾವು ಬಹಳ ಆಲೋಚನೆಮಾಡಿ ನೋಡಬೇಕಾಗಿದೆ. ಈಗಲೇ 7½ ಲಕ್ಷಕ್ಕೆ ಒಬ್ಬ ಪ್ರತಿನಿಧಿಯಾಗಿರತಕ್ಕದ್ದೇ ಜಾಸ್ತಿ ಎಂದು ಹೇಳುತ್ತಿರುವಾಗ ಇನ್ನು ಮುಂದಕ್ಕೆ ಬರಬರುತ್ತಾ 10 ಲಕ್ಷಕ್ಕೆ ಒಬ್ಬ ಪ್ರತಿನಿಧಿಯೆಂದೂ ಅನಂತರ 1961ಕ್ಕೆ 12 ಲಕ್ಷ ಪ್ರಜೆಗಳಿಗೊಬ್ಬ ಪ್ರತಿನಿಧಿಯೆಂದೂ ಹೇಳುತ್ತಾ ಹೋದರೆ ಸದಸ್ಯರಾಗತಕ್ಕವರಿಗೂ ಮತ್ತು ಚುನಾವಣೆದಾರರಿಗೂ ಯಾವ ಸಂಪರ್ಕವಿರುತ್ತದೆ, ಅಥವಾ ಯಾವ ಬಾಂಧವ್ಯವಿರುತ್ತದೆ. ಅಥವಾ ಅವರ ಕಷ್ಟ ಸುಖಗಳೇನೆಂಬುದನ್ನು ಹೇಗೆ ಅರ್ಥಮಾಡಿಕೊಳ್ಳುವುದಕ್ಕಾಗುತ್ತದೆ? ಸದಸ್ಯನಾದ ಮನುಷ್ಯನು, ತನ್ನ ಚುನಾವಣಾ ಕ್ಷೇತ್ರದಲ್ಲಿ ಆಗಾಗ್ಯೆ ಹೋಗಿಬರತಕ್ಕಂಥ ಅವಶ್ಯಕತೆ ವಿಶೇಷವಾಗಿದೆ. ಸದಸ್ಯರಾಗತಕ್ಕವರೆಲ್ಲರೂ ಹಣಗಾರರಾಗಿರುತ್ತಾರೆಯೇ, ಒಂದು ವೇಳೆ ಹಣಗಾರರಿದ್ದರೂ ಅದು ಕಾರ್ಯತಃ ಸಾಧ್ಯವಿರುತ್ತದೆಯೇ ಎಂಬ ಅನೇಕ ವಿಚಾರಗಳನ್ನು ತಾವು ಗಮನಿಸಿ ಹೀಗೆ ನಾನಾ ಮುಖದಿಂದ ಇದನ್ನು ವಿಮರ್ಶೆಮಾಡಬೇಕಾಗಿರುತ್ತದೆ. ಈ ಒಂದು ಅಂಶಕ್ಕೆ ಮಾನ್ಯ ಸದಸ್ಯರೆಲ್ಲರೂ ಗಮನಕೊಡಬೇಕೆಂದು ನಾನು ವಿನಯದಿಂದ ತಮ್ಮೆಲ್ಲರನ್ನೂ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ಅಂಶವನ್ನು ತಾವೆಲ್ಲರೂ ಒಂದು ತೀವ್ರಾಸಕ್ತಿಯಿಂದಲೂ ಮತ್ತು ದೂರದೃಷ್ಟಿಯಿಂದಲೂ ಆಲೋಚನೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ತಿದ್ದುಪಡಿಗೆ ನಾವು ಈ ದಿವಸ ನಮ್ಮೆಲ್ಲರ ಒಪ್ಪಿಗೆಯನ್ನು ಕೊಟ್ಟಿದ್ದೇ ಆದರೆ ಮುಂದೆ ಈ ನಿಕಟ ಬಾಂಧವ್ಯ ಮತ್ತು ಸಂಪರ್ಕಗಳೆಲ್ಲಾ ಖಂಡಿತ ತಪ್ಪಿಹೋಗುತ್ತವೆ. ಹೀಗೆ ಚುನಾವಣಾ ಕ್ಷೇತ್ರಗಳ ಜನಸಂಖ್ಯೆ ಹೆಚ್ಚಾಗುತ್ತ ಹೋಗುವುದಾದರೆ ಮುಂದೆ ಇದರಿಂದ ಏನಾಗಬಹುದೆಂಬುದನ್ನು ಮಾನ್ಯ ಮಹಮದ್ ಇಮಾಂರವರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ನನ್ನಂಥ ಒಬ್ಬ ಸಾಮಾನ್ಯ ಮನುಷ್ಯನಿಗೆ, ಬಡವನಾಗಿರತಕ್ಕವನಿಗೆ, ದುಡ್ಡಿಲ್ಲದವನಿಗೆ ಇಂಥ ದೊಡ್ಡ ದೊಡ್ಡ ಚುನಾವಣಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಂತು ಸದಸ್ಯನಾಗಿ ಆರಿಸಿ ಬರುವುದಕ್ಕೆ ಸಾಧ್ಯವಿಲ್ಲ. ಈ 'ಚುನಾವಣೆ' ಎಂಬ ಒಂದು ಪದದಿಂದಲೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಷ್ಟೆಷ್ಟು ಪ್ರತಿಕ್ರಿಯೆಗಳು ಎಷ್ಟೆಷ್ಟು ಅನರ್ಥಗಳು ಆಗುತ್ತಿವೆ ಎಂಬುದನ್ನು ಪ್ರಾಜ್ಞರಾಗಿರತಕ್ಕವರು ಈಗಾಗಲೇ ಹೇಳಿರುತ್ತಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಚುನಾವಣಾ ಪ್ರಯೋಗದಿಂದ ಆಗತಕ್ಕಂಥ, ಎಂದರೆ, ಈ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಕೇವಲ 'ಡೆಮಾಕ್ರೆಸಿ' ಎಂಬ ಈ ಒಂದು ಪದದ ಹೆಸರಿನಲ್ಲಿ ಏಕನಾಯಕ ಪ್ರಜಾಪ್ರಭುತ್ವವಾಗುತ್ತಿದೆಯೆಂದು ದೊಡ್ಡವರು ಹೇಳುತ್ತಿದ್ದಾರೆ. ಒಂದು ಪಾರ್ಟಿಗೆ ಒಬ್ಬ ನಾಯಕ, ಆ ನಾಯಕ ಹೇಳಿದ ರೀತಿಯಲ್ಲಿ ಆ ಸರ್ಕಾರ ನಡೆಯಬೇಕು, ಆದರೆ ಹೆಸರಿಗೆ ಮಾತ್ರ ಡೆಮಾಕ್ರೆಸಿ. ಜನರ ಚುನಾವಣೆಯೇನೋ ಡೆಮಾಕ್ರೆಸಿ ತತ್ವದ ಮೇಲೆ ಆಗುತ್ತದೆ. ಹೀಗೆ ಒಂದು ಡೆಮಾಕ್ರೆಸಿ ಭಾವನೆಯ ಮೇಲೆ ಚುನಾವಣೆಗಳಾದರೂ, ಮುಂದೆ ಇದರ ಕೆಲಸಕಾರ್ಯಗಳು ನಡೆಯತಕ್ಕಂಥ ರೀತಿ ನೀತಿಗಳನ್ನು ನೋಡಿದರೆ ಇದರಲ್ಲಿ ಪಾರ್ಟಿ ಭಾವನೆ ದಿನೇದಿನೇ ಬೆಳೆಯುತ್ತ ಬಂದು ಕೊನೆಗೆ ಈ ಡೆಮಾಕ್ರೆಸಿ ಎಂಬ ಹೆಸರಿನಲ್ಲಿ ಏಕನಾಯಕ ಪ್ರಜಾಪ್ರಭುತ್ವವೇರ್ಪಡುತ್ತದೆಯೆಂಬುದು ಎದ್ದುಕಾಣುತ್ತದೆ. ಇದು ಅಷ್ಟು ಸರಿಯಲ್ಲವೆಂದು ಹೇಳಲೇಬೇಕಾಗುತ್ತದೆ. ಇಲ್ಲವೇ ಡೆಮಾಕ್ರೆಸಿಗೆ ವಿರುದ್ಧವಾಗಿ ಫ್ಯಾಸಿಸ್ಟ್ ಡೆಮಾಕ್ರೆಸಿಯಾಗುತ್ತದೆಂದು ಹೇಳಬೇಕಾಗುತ್ತದೆ. ಹೀಗೆಲ್ಲ ಇರುವುದರಿಂದ ನೀವು ಈ ದಿವಸ ಯಾವುದಕ್ಕೆ ತಮ್ಮೆಲ್ಲರ ಒಪ್ಪಿಗೆಯನ್ನು ಕೊಡುತ್ತಿದ್ದೀರೆಂಬುದನ್ನು ಸ್ವಲ್ಪ ತಾವು ಒಂದು ವಿಶಾಲ ಹೃದಯದಿಂದ ಆಲೋಚನೆಮಾಡಿ ನೋಡಬೇಕಾಗಿದೆ. ಈಗ ಏನಾಗುತ್ತಿದೆಯೆಂದರೆ—ಈ ಚುನಾವಣಾ ಕ್ಷೇತ್ರ ಜನಸಂಖ್ಯೆಗಳು ವಿಶಾಲವಾಗುತ್ತ ಬಂದರೆ ಇದರ ಪರಿಣಾಮ ಏನು? ನಮ್ಮ ದೇಶದಲ್ಲಿ ಇವೊತ್ತಿನ ದಿವಸ

ಶ್ರೀ ಮಹಮದ್ ಇಮಾಂರವರು ಹೇಳಿರುವ ಹಾಗೆ, ಒಂದು ಪದವನ್ನು ಉಪಯೋಗಿಸುವುದಾದರೆ, ಆ 'ಫ್ಯಾಸಿಸಂ' ಸ್ಥಾಪಿತವಾಗಬಹುದು. ಹೀಗೆ ಈ ಪದವನ್ನು ಹೇಳುವುದರಲ್ಲಿ ಅಷ್ಟು ಭಯಪಡಬೇಕಾದ ಆವಶ್ಯಕತೆಯೇನೂ ಇಲ್ಲ ಮತ್ತು ಇದು ಅಷ್ಟು ಅಲಕ್ಷ್ಯ ಮಾಡುವಂತಹ ಪದವೂ ಕೂಡ ಅಲ್ಲ.

ನಮ್ಮ ದೇಶದಲ್ಲಿ ಒಂದು ಧರ್ಮ ಒಂದು ನೀತಿಯ ಮಟ್ಟದ ಮೇಲೆ ಸಾರ್ವಜನಿಕ ಕ್ಷೇತ್ರದಲ್ಲಿ ಸಾರ್ವಜನಿಕ ಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡು ಇಲ್ಲಿನವರು ಅನೂಚಾನವಾಗಿ ಕೆಲಸ ನಡೆಸುತ್ತಾ ಬಂದಿದ್ದಾರೆ. ಇಂಥ ಧರ್ಮವನ್ನು ಕಟ್ಟಿಕೊಂಡಿರತಕ್ಕಂಥ ನಮ್ಮ ದೇಶಕ್ಕೆ ಪಾಶ್ಚಾತ್ಯರ ಸೋಂಕಿಗೆ ಒಳಪಟ್ಟಿರತಕ್ಕಂಥ ಒಂದು ರಾಜ್ಯಾಂಗ ಪದ್ಧತಿಯನ್ನು ಮತ್ತು ಒಂದು ಚುನಾವಣಾ ಪದ್ಧತಿಯನ್ನು ಅಳವಡಿಸಿಕೊಂಡು ಹೋಗುವುದಾದರೆ ದೇಶದ ಸ್ಥಿತಿ ಏನಾಗುತ್ತದೆಂಬುದನ್ನು ನಾನಿನ್ನು ಹೆಚ್ಚಿಗೆ ಲಂಬಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಅವರದೇ ಆದ ಶೈಲಿಯಲ್ಲಿ ಶ್ರೀ ಮಹಮದ್ ಇಮಾಂರವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಅವುಗಳನ್ನೇ ನಾನೂ ಸಹ ಪ್ರಸ್ತಾಪಿಸುತ್ತಾ ಹೋದರೆ ಅದನ್ನು ತರ್ಜುಮೆ ಮಾಡಿದಂತಾಗುತ್ತದೆ. ಅದರೆ ಮಾನ್ಯ ಸದಸ್ಯರ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡವಂಥ ಎರಡು ಮೂರು ವಿಷಯಗಳನ್ನು ಮಾತ್ರ ನಾನೀಗ ತಮ್ಮೆಲ್ಲರ ಗಮನಕ್ಕೆ ತರುತ್ತೇನೆ. ಖಂಡಿತ ನಾವು ಇದಕ್ಕೆ ಒಪ್ಪುವುದಕ್ಕಾಗುವುದಿಲ್ಲ ಭಾರತ ದೇಶದಲ್ಲಿ ಯಾರು ನಾಯಕತ್ವವನ್ನು ವಹಿಸಿ, ಯಾರು ನಾಯಕವರ್ಗದಲ್ಲಿದ್ದಾರೋ ಅವರು ವಿಕೇಂದ್ರೀಕೃತ ಅಡಳಿತವಿರತಕ್ಕ ಸರ್ಕಾರವನ್ನೂ ಮತ್ತು ವಿಕೇಂದ್ರೀಕೃತವಾಗಿರತಕ್ಕ ರಾಜ್ಯಭಾರಕ್ರಮವನ್ನೂ ಮಾಡಬೇಕೆಂದು ಹೇಳುತ್ತಿದ್ದುದು ತಮ್ಮೆಲ್ಲರ ಜ್ಞಾಪಕದಲ್ಲಿರಬಹುದು. ಈ ಹಿಂದೆ ಲೀಗಿಗೂ ಮತ್ತು ಕಾಂಗ್ರೆಸ್ಸಿಗೂ ಒಂದು ಒಡಂಬಡಿಕೆಯಾಗದೆ ಇದ್ದಾಗ, 'ಪಾಕೀಸ್ತಾನ್' ಎಂಬ ಕೂಗು ದೇಶದಲ್ಲಿ ಇನ್ನೂ ಏಳುವುದಕ್ಕೆ ಮುಂಚೆಯೇ ಏನು ಒಂದು ಪರಿಸ್ಥಿತಿಯಿತ್ತೋ ಆಗ, ಕಾಂಗ್ರೆಸ್ಸಿನವರು ಮುಸ್ಲಿಮರ ಮತ್ತು ಇತರ ಅಲ್ಪ ಸಂಖ್ಯಾತರ ಹಿತರಕ್ಷಣೆಮಾಡುವುದಕ್ಕಾಗಿ ಅವರೆಲ್ಲರಿಗೂ ಒಂದು ಸಮಾಧಾನ ಹೇಳಲಾಗಿತ್ತು. The Residuary Powers shall vest in the State ಎಂದು ಹೇಳಲಾಗಿತ್ತು. ಅಂದರೆ ಆಯಾ ಸಂಸ್ಥಾನದಲ್ಲೇ ರಾಜ್ಯಾಂಗದಲ್ಲಿ ಉಳಿಸಿರತಕ್ಕ ಎಲ್ಲ ಹಕ್ಕುಗಳನ್ನೂ ಮೀನಲಿಷ್ಟು ಕೇಂದ್ರೀಕೃತ ಸರ್ಕಾರ ವ್ಯವಸ್ಥೆಯಾಗದಿರುವಷ್ಟು ಮಟ್ಟಿಗೆ ನೋಡಿಕೊಂಡರೆ ದೇಶದ ಭದ್ರತೆಯೂ ಉಂಟಾಗುತ್ತದೆ, ಅಲ್ಪಸಂಖ್ಯಾತರ ಹಿತರಕ್ಷಣೆಯೂ ಆಗುತ್ತದೆ ಎಂಬುದಾಗಿ ಹೇಳಿಕೊಂಡು ಬರುತ್ತಿದ್ದಂಥ ಕಾಂಗ್ರೆಸ್ಸಿನ ತತ್ವವನ್ನು ಈ ದಿವಸ ಆ ನಾಯಕವರ್ಗ ಕೈಬಿಟ್ಟು ಕೇಂದ್ರೀಕರಣ ವ್ಯವಸ್ಥೆಯಲ್ಲಿ ಕೈ ಹಾಕುತ್ತಿದೆ. ಈಗಿರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ಇಂಥ ಕೇಂದ್ರೀಕೃತ ವ್ಯವಸ್ಥೆಯಿಂದ ಸಂಸ್ಥಾನಗಳಿಗೆ ತತ್ರಾಪಿ ನಮ್ಮ ಮೈಸೂರಿಗೆ, ತುಂಬಾ ಅನ್ಯಾಯ ಉಂಟಾಗುತ್ತದೆ ಎಂಬುದನ್ನು ಯಾರೂ ಮರೆಯಲಾಗದು ಎಂದು ನಾನು ಒತ್ತಿ ಒತ್ತಿ ಹೇಳುತ್ತೇನೆ.

ಈ ರಾಜ್ಯಾಂಗಕ್ಕೆ ಸಂಬಂಧಪಟ್ಟ ಚುನಾವಣೆ ಕ್ಷೇತ್ರದಲ್ಲೂ ಕೂಡ ಈ ಕೇಂದ್ರೀಕೃತ ಭಾವನೆಯ ಸೋಂಕು ಅದರ ಒಂದು ಚಪಲ ಎದ್ದು ಕಾಣುತ್ತದೆ. ತಾವು ಇಂಥ ಕಾನೂನನ್ನು ತಂದರೆ ಬಹಳ ತೊಂದರೆಯಾಗುತ್ತದೆ. ಖಂಡಿತವಾಗಿಯೂ ಇದನ್ನು ತಾವುಗಳಾರೂ ಒಪ್ಪಬಾರದು.

ಶ್ರೀ ಇಮಾಂ ಸಾಹೇಬರು ಹೇಳಿದಹಾಗೆ ಸರ್ಕಾರಿ ಪಕ್ಷದವರಾದ ನಿಮಗೆ ಇದು ಮನಸ್ಸಿಗೆ ಹಿಡಿಸುತ್ತದೋ ಇಲ್ಲವೋ ಗೊತ್ತಿಲ್ಲ. ಪಾರ್ಟಿ ಭಾವನೆ ಬೆಳೆಯಲಿಕ್ಕೆ ಇದು ಬಹಳ ಸಹಾಯಕವಾಗುತ್ತದೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ, ಪಾರ್ಟಿಲಕ್ಷಣ ಎನ್ನುವುದು ನಮ್ಮ ಸಂಸ್ಕೃತಿ ಧರ್ಮಗಳಿಗೆ ವಿರೋಧವಾದದ್ದು ನಮ್ಮ ದೇಶಕ್ಕೆ ಅನುಕೂಲವಾಗುವುದಿಲ್ಲ. ಈಗ ಐದು ವರ್ಷದ ಪರಿಣಾಮ ನೋಡಿ? ಪಾರ್ಟಿ ಸರ್ಕಾರವೇನಿದೆ ಅದನ್ನು ಪಾಶ್ಚಿಮಾತ್ಯ ದೇಶಗಳಿಂದ ತಂದಿರಿಸಿ ಈಗ ಅವರನ್ನೇ ಅನುಕರಣ ಮಾಡುವುದಕ್ಕೆ ಪ್ರಾರಂಭಮಾಡಿದ್ದೇವೆ. ಇದರ ಅನರ್ಥದಿಂದ ದೇಶದಲ್ಲಿ ಎಲ್ಲೆಲ್ಲೂ ಬೇರ್ಪಡಿಕೆಯುಂಟಾಗುತ್ತಿದೆ. ಬರೆತು ಕೆಲಸ ಮಾಡುವುದಕ್ಕೆ ಬದಲಾಗಿ ಬೇರ್ಪಟ್ಟು ಕೆಲಸ ಮಾಡುವುದಕ್ಕೆ ಪ್ರಾರಂಭವಾಗಿದೆ. ಆದ್ದರಿಂದ ನಾವು ಇದಕ್ಕೆ ಒಪ್ಪಿಗೆ ಕೊಟ್ಟಿದ್ದೇ ಆದರೆ ಪ್ರಾಯಶಃ ಇನ್ನು 20-30 ವರ್ಷಗಳಲ್ಲಿ ಕ್ರಾಂತಿಯಾಗಿ ರಕ್ತಪ್ರವಾಹ ಹರಿದು ಸಂಕ್ರಾಂತಿ ರೂಪದಲ್ಲಿ ಬದಲಾವಣೆಗಳಾಗುವುದಕ್ಕೆ ಬದಲು ಇದಕ್ಕೆ ನಾವು ಒಪ್ಪಿಗೆ ಕೊಟ್ಟಹಾಗಾಗುತ್ತದೆ. ಅಮೇರಿಕಾದಲ್ಲಿ ಆಚರಣೆಯಲ್ಲಿರುವ ಒಂದು ಸಂಪ್ರದಾಯವೇನೆಂದರೆ, ವಿಕೇಂದ್ರೀಕೃತ ವ್ಯವಸ್ಥೆ Federal Constitution ಸಂಯುಕ್ತ ರಾಜ್ಯಾಂಗ ರೀತಿ. ಆ ರೀತಿಯಲ್ಲಿ ನಮ್ಮ ರಾಜ್ಯಾಂಗವನ್ನು ಬದಲಾವಣೆ ಮಾಡುವುದು ಅಗತ್ಯ.

ಮಾನ್ಯ ಸಭಾಪತಿಗಳು, ಇಮಾಂ ಸಾಹೇಬರು ಮಾತನಾಡುವಾಗ, ಅವರು ಪಾರ್ಲಿಮೆಂಟಿನಲ್ಲಿದ್ದು ಅಲ್ಲೇ ಈ ಮಾತನ್ನು ಆಡಬಹುದಾಗಿತ್ತಲ್ಲಾ ಎಂದು ಹೇಳಿದರು. ನಿಜ, ಅದು ಅವರ ದೌರ್ಬಲ್ಯ. ನಮಗೂ ಅದೇ ದೌರ್ಬಲ್ಯ. ಈಗಲೇ, $7\frac{1}{2}$ ಲಕ್ಷ ಜನರಿಂದ ವೋಟು ತೆಗೆದುಕೊಂಡು ಬರಬೇಕೆಂದು ಇರುವಾಗಲೇ ನಾವುಗಳು ಓಟು ತೆಗೆದುಕೊಂಡು ಬರುವುದಕ್ಕೆ ಸಾಧ್ಯವಿಲ್ಲದಿರುವಾಗ ಇಷ್ಟೊಂದು ಅಗಾಧವಾದ ಪಾರ್ಟಿ ಜನಗಳ ಮುಂದೆ ಮೂಲೆ ಮೂಲೆಗಳಲ್ಲಿ ನುಚ್ಚು ನೂರಾಗಿ ಕೂರುವ ನಾವುಗಳು ಆ ವಿಶಾಲ ಕ್ಷೇತ್ರದಲ್ಲಿ ಹೋಗಿ ಕೆಲಸಮಾಡುವುದಕ್ಕೆ ಏನು ದೌರ್ಬಲ್ಯವಿದೆಯೆಂಬುದನ್ನು ತಾವು ಬಿಚ್ಚಿ ಕೇಳಬೇಕೇ? ನಿಜವಾಗಿಯೂ ನನಗೂ ಆ ದೌರ್ಬಲ್ಯವಿದೆ. ಹೀಗಿರುವಲ್ಲಿ ಸರ್ಕಾರಿ ಪಕ್ಷದವರಾಗಿ ನೀವು 75 ಜನರು ಇರುವಾಗ ಪ್ರತಿಯೊಂದು ಸಾರಿಯೂ ಅದನ್ನು ಬಿಚ್ಚಬೇಕೇ ಎಂದು ಕೇಳುತ್ತೇನೆ. ಆ ಒಂದು ದೃಷ್ಟಿಯಿಂದ ಇದನ್ನು ನೋಡುವುದಿಲ್ಲ. ಇದರಿಂದ ಮುಂದೆ ಬಹಳ ಅನರ್ಥಗಳಾಗುತ್ತವೆ. ಕೂಡಿದ ಮಟ್ಟಿಗೂ ನಾವೆಲ್ಲರೂ ಸೇರಿ ಇದನ್ನು ವಿರೋಧಿಸುವುದು ಬಹಳ ಮುಖ್ಯ.

ಹೀಗೆಯೇ ಅಸೆಂಬ್ಲಿಯ ವಿಚಾರದಲ್ಲಿ ಒಂದು ಮಾತು ಶ್ರೀ ರಾಮಯ್ಯನವರು ಇದನ್ನೇ ಸ್ಪಷ್ಟೀಕರಣ ಮಾಡಿದ್ದಾರೆ. ಈ ಅಸೆಂಬ್ಲಿಗೆ ರಾಜ್ಯಾಂಗದ ಪ್ರಕಾರ ಮೇಲ್ಮಟ್ಟ 500ರ ವರೆಗೂ ಇರುವುದಕ್ಕೆ ಸಾಧ್ಯ. ಅಂಥಾದ್ದರಲ್ಲಿ ಈಗ ಕೇವಲ 100 ಜನರಿದ್ದಾರೆ. ಇನ್ನೂ 400 ಜನರು ಬರುವುದಕ್ಕೆ ಸಾಧ್ಯ. ಅದಕ್ಕೆ ಅವಕಾಶವಿದ್ದರೆ ನಮಗೆ ಅಷ್ಟು ತೊಡಕು ಉಂಟಾಗಲಾರದು. ಅದಿಲ್ಲದೆ. ಈ ತತ್ವವನ್ನು ಒಪ್ಪಿಕೊಂಡು ಇದರಂತೆ ಸರ್ಟಿಫಿಕೇಟು ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಅಸೆಂಬ್ಲಿಗೆ ಈಗಿರತಕ್ಕ ಜನಗಣನೆಯ ಪ್ರಕಾರ ಎಷ್ಟು ಜನ ಬರಲಿಕ್ಕೆ ಅವಕಾಶವಿದೆಯೋ ಅಷ್ಟು ಜನರೂ ಬರುವುದಕ್ಕೆ ಅವಕಾಶ ಮಾಡಬೇಕು. ಹಾಗೆ ಒಂದುವೇಳೆ ಜನಸಂಖ್ಯೆಗನುಗುಣವಾಗಿ ಬರಲಿಕ್ಕೆ ಅವಕಾಶಮಾಡುವು

(ಶ್ರೀ ಕೆ. ಪಟ್ಟಾಭಿರಾಮನ್)

ದಾದರೆ, ಪಾರ್ಲಿಮೆಂಟಿನಲ್ಲಿ 500 ಕ್ಕಿಂತಲೂ ಜಾಸ್ತಿಯಾಗಿ 600-700ರ ವರೆಗೂ ಬರಲಿಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡಬೇಕೆಂದು ಕೇಳುವುದು ನ್ಯಾಯವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು, ಚರ್ಚೆಯಾಗುವ ವಿಷಯಗಳನ್ನೆಲ್ಲಾ ಮೇಲಿನ ಸರ್ಕಾರಕ್ಕೆ ತಿಳಿಸಿ, Federal type ಎಂದು ಅಮೆರಿಕಾದ ಫೆಡರಲ್ ಕಾನ್ಸ್ಟಿಟ್ಯೂಷನ್ನಿನಲ್ಲಿ ಹೇಗೆ ಸಂಸ್ಥಾನದ ಪ್ರತಿನಿಧಿಗಳನ್ನು ಫೆಡರಲ್ subjectsಗಳಲ್ಲಿ ಮಾತ್ರ ಸಂಯುಕ್ತ ರಾಜ್ಯಾಂಗ ವಿಚಾರಗಳನ್ನು ಚರ್ಚೆ ಮಾಡುವುದಕ್ಕಾಗಿ ಮಾತ್ರ ಚುನಾಯಿಸಿ ಕಳುಹಿಸುತ್ತಾರೋ ಹಾಗೆಯೇ ಇಲ್ಲಿಯೂ ಮಾಡಿ, ಮಿಕ್ಕ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಕೇಂದ್ರದ ಅಧಿಕಾರ ವಿಕೇಂದ್ರೀಕರಣವಾಗಿ ಸಂಸ್ಥಾನಗಳಲ್ಲಿ ಉಳಿಯುವಂತೆ, ನಮ್ಮ ರಾಜ್ಯಾಂಗದಲ್ಲಿ ವ್ಯವಸ್ಥೆಮಾಡುವುದು ಅಗತ್ಯ. ಇದರಿಂದ ಇವೊತ್ತಿನದಿವಸ ಇರುವ ಅನೇಕ ಕಷ್ಟಗಳು ದೂರವಾಗುತ್ತವೆ. ಒಂದು ಕಡೆ ಈ ಪ್ರಜಾಪ್ರಭುತ್ವಕ್ಕೆ ತಿಲತರ್ಪಣ ಕೊಡುವ ಮಾರ್ಗ ಇನ್ನೊಂದು ಕಡೆ ಫಾಸಿಸಂ ಬೆಳೆಯಲಿಕ್ಕೆ ಪ್ರೋತ್ಸಾಹ ಕೊಡುವ ಮಾರ್ಗ—ಇವುಗಳನ್ನು ತಪ್ಪಿಸಲು ಇದರಿಂದ ಸಾಧ್ಯವಾದೀತು. ಈ ದೃಷ್ಟಿಯಿಂದಲೇ ಇಂದು ದಕ್ಷಿಣ ಭಾರತದಲ್ಲಿ ಅನೇಕ ಕಡೆ ಇದಕ್ಕೆ ತೀವ್ರವಾದ ಪ್ರತಿಭಟನೆ ಇದೆ. ತಿರುವಾಂಕೂರು ಸಂಸ್ಥಾನದ ಶಾಸನ ಸಭೆಯಲ್ಲಿ ಇದನ್ನು ಹೇಗೆ ತಿರಸ್ಕರಿಸಿದ್ದಾರೆಂಬುದನ್ನು ನೋಡಿ! ದಕ್ಷಿಣ ಹಿಂದೂಸ್ಥಾನದ ಜನಗಳ ಬುದ್ಧಿ ಹೆಚ್ಚು ಎಂಬುದಕ್ಕೆ ಇದೇ ಸಾಕ್ಷಿ. ಅವರ ಹಾಗೆಯೇ ಪಕ್ಕದಲ್ಲಿ ನಾವೂ ಅವರ ಅಕ್ಕತಂಗಿಯರ ಹಾಗಿದ್ದೇವೆ. ತಿರುವಾಂಕೂರಿನವರು ಬಹಳ ಯೋಚನೆಮಾಡಿ ಆ ತೀರ್ಮಾನಕ್ಕೆ ಬಂದಿದ್ದಾರೆಂದು ಹೇಳಬೇಕು. ಅವರು ನಿಜವಾಗಿಯೂ ಬಹಳ ಬುದ್ಧಿವಂತರು. ಆದರಲ್ಲೂ ಮಾಲೆಯಾಳಿಗಳೆಂದರೆ ಪ್ರಾಯಶಃ ಹಿಂದೂಸ್ಥಾನದಲ್ಲೇ ಹೆಚ್ಚಿನ ಬುದ್ಧಿವಂತರೆಂದು ಹೇಳಬಹುದು. ಅಂಥವರು ಯೋಚನೆಮಾಡಿ ಈಗಾಗಲೇ ಒಂದು ಹೆಜ್ಜೆ ಮುಂದೆ ಹೋಗಿ ಈ ನಿರ್ಣಯವನ್ನು ನಿರಾಕರಣೆ ಮಾಡಿದ್ದಾರೆ. ನಿರಾಕರಣೆ ಮಾಡಿದರೂ ಏನಾಗುತ್ತದೆಂದು ಕೇಳಬಹುದು. ರಾಜ್ಯಾಂಗದ ದೃಷ್ಟಿಯಲ್ಲಿ ಮಾತನಾಡುವಾಗ ಎಲ್ಲರೂ ಭಕ್ತಿಯಿಂದ ಕೂಡಿದ್ದು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಶ್ರೀ ರಾಮಚಂದ್ರರಾಯರು ಹೇಳಿದರು. ರಾಜ್ಯಾಂಗದ ಮೇಲೆ ನಮಗಿರುವ ಶ್ರದ್ಧೆಯೇ, ಭಕ್ತಿಯೇ ಇವರ ವಿಷಯದಲ್ಲಿ ಇಷ್ಟೊಂದು ವಿರೋಧ ಬೆಳೆಸುವುದಕ್ಕೆ ಕಾರಣವಾಗಿರುವುದು. ಆ ಭಕ್ತಿಯೇ ನಮಗೆ ಇಷ್ಟೊಂದು ಬಲ ಕೊಟ್ಟಿದೆ. ಇಲ್ಲದಿದ್ದರೆ ಇಷ್ಟುಹೊತ್ತಿಗೆ ನಾನೂ 'ಹೋಗಿ, ಹೋಗಿ' ಎಂದು ರಾಮಚಂದ್ರರಾಯರಿಗೇ ಕೈಯೆತ್ತುತ್ತಿದ್ದೆ. ಆದರೆ ಭಕ್ತಿಯೇ ನನ್ನನ್ನು ಈ ರೀತಿಯಾಗಿ ಇದನ್ನು ವಿರೋಧಿಸಲಿಕ್ಕೆ ಪ್ರೇರೇಪಿಸುತ್ತಿದೆ. ಒಂದು ವಿಧದಲ್ಲಿ ಈಗ 5 ವರ್ಷದೊಳಗಾಗಿಯೇ ಈ ವಿಷಯ ಇಷ್ಟೊಂದು ಪ್ರಾಮುಖ್ಯವಾಗಿ ಬಂದದ್ದು ನನಗೆ ಬಹಳ ಸಹಾಯಕವಾಗಿದೆಯೆಂದು ನಂಬಿ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಪೂರ್ಣ ನಿರಾಕರಣೆ ಕೊಟ್ಟು, ನಮಗಿಂತ ಹೆಚ್ಚು ಪ್ರಾಜ್ಞರಾದ ಆ ಕಡೆಯವರು ಮಾತನಾಡುವುದಕ್ಕೆ ಪ್ರಾರಂಭಮಾಡಿದಾಗ ಇದನ್ನು ನಿರಾಕರಿಸಲೆಂದು ಸೂಚಿಸುತ್ತೇನೆ. ನಾವು ಹೇಳಿರುವ ರೀತಿಯಲ್ಲಿ ಬದಲಾವಣೆ ಮಾಡಿದರೆ ಮುಂದೆ ದೇಶದ ಭವಿಷ್ಯ ಸುಖವಾಗಿರುತ್ತದೆಂಬ ಆಶ್ವಾಸನವನ್ನು ನಾವು ಕೇಂದ್ರ ಸರ್ಕಾರದವರಿಗೆ ಕೊಟ್ಟು ಅವರು ಈ ತೆರದ ತಿದ್ದುಪಡಿಯಾಗುವುದಕ್ಕೆ ಅವಕಾಶವುಂಟುಮಾಡಿ ಕೊಡಬೇಕೆಂದು ಹೇಳುತ್ತೇನೆ.

ಈ ಎರಡು ಮಾತುಗಳನ್ನು ಹೇಳುವಾಗ, ಇದು ನನ್ನೊಬ್ಬನ ವಿರೋಧವಲ್ಲ, ನಿರಾಕರಣೆಯಲ್ಲ. ಶ್ರೀ ರಾಮಚಂದ್ರರಾಯರೂ ಈ ವಿಷಯದಲ್ಲಿ ನಮ್ಮ ಜೊತೆಯಲ್ಲಿರಬೇಕು. ಪ್ರಜಾಸತ್ತೆಯಲ್ಲಿ ನಮಗೆಷ್ಟು ನಿಷ್ಠೆ, ವಿಶ್ವಾಸ, ನಂಬಿಕೆಯಿದೆಯೋ ಅವರಿಗೂ ಇದೆಯೆಂಬುದು ಗೊತ್ತಿದೆ. ಪ್ರಾಯಶಃ ಆ ಸ್ಥಾನದಲ್ಲಿದ್ದು ಸಾಂಪ್ರದಾಯಿಕವಾದ ರೂಪದಲ್ಲಿ ಈ ಸೂಚನೆಯನ್ನು ನಮ್ಮ ಮುಂದಿಟ್ಟಿದ್ದಾರೆ, ಅಷ್ಟೆ. ಸಾಂಪ್ರದಾಯಿಕವಾಗಿ ಹಾಗಿಟ್ಟಮೇಲೆ, ಇನ್ನು ವಿಚಾರ ದೃಷ್ಟಿಯಿಂದ ಈ ಕಾರ್ಯಕ್ಕೆ ಅವರೂ ಅನುವಾಗಬೇಕೆಂದು ಪ್ರಾರ್ಥನೆಮಾಡಿ, ಏಕಾಭಿಪ್ರಾಯದಿಂದ ಈ ಏಕನಾಯಕತ್ವವನ್ನು ಸ್ಥಾಪಿಸುವುದಕ್ಕೆ ನಮ್ಮ ಪೂರ್ಣ ವಿರೋಧವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri M. V. RAMA RAO (Tumkur).—Sir, the resolution that has been moved by my friend, the Hon'ble Minister for Law, has met with a surprising hostility from the members of the Opposition. Though I have listened with great attention to the speech of the Leader of the Opposition as well as to the speech made by Sri Pattabhiraman, I have really not been able to perceive very clearly the exact grounds on which they attack this resolution. Now the content of this resolution, if explained a little further, perhaps may enable us to see that they are really opposing a measure which is intended to secure greater representation to us who are in Mysore, and if that point is borne in mind and if that is correct, then I am sure my friends who happen to be in the Opposition to-day will not hesitate to agree to this resolution, because if and when they happen to be in a position to form a Government in this country this provision ....

Sri K. PATTABHIRAMAN.—At this rate never!

Sri M. V. RAMA RAO.—........ .... will be of as much of advantage to them as it is going to be of advantage to those who happen to be in power to-day. What has actually happened is this:

Article 81—Clause (1), sub-clause (b) of the Constitution reads like this:

"For the purpose of sub-clause (a), the States shall be devided,

grouped or formed into territorial constituencies and the number of members to be allotted to each such constituency shall be so determined as to ensure that there shall be not less than one member for every 750,000 of the population and not more than one member for every 500,000 of the population."

This is the article as it stood before it was amended by Parliament. In the amending Bill which went through all the processes known to the Legislature and as it emenced from the Select Committee to which it had been referred by the House of the People and as it was finally passed by the House, Clause 2 reads like this.

> "Amendment of article 81.—In sub-clause (b) of clause (1) of article 81 of the Constitution, the words and figures 'not less than one member for every 750,000 of the population and' shall be omitted."

The effect of this particular amendment on the article as it originally stood would be that for the purposes of sub-clause (a), the States shall be divided, grouped or formed into territorial constituencies and the number of members to be allotted to each such constituency shall be so determined as to ensure that there shall be not more than one member for every 500,000 of the population. Is it the argument of the Opposition that it is preferable to have representation on the scale of not more than one for every 750,000 instead of representation on the scale of not more than one for every 500,000 of the population? Sir, the debate that followed the introduction of this Bill in the House of the People makes it clear that it was not the desire to make any hurried amendment of the Constitution that actuated those who brought forward this particular Bill there. It was after deliberate and careful examination of the implications of this amendment of the particular article that this Bill was brought and the relevant portion of the debate in the House of the People would, I think, dispel the doubts that have been raised as to the probable effect of this amendment if we choose to ratify it in this House. And, as the Law Minister also pointed out, very much really does not seem to depend upon whether one particular Legislature ratifies it or not, though I do not suggest that our opinion is therefore irrelevant. It is certainly relevant and if I am able to make the point that I have been touching clear to my friends of the Opposition, I am sure they will revise their opinion and extend their support to this resolution. The effect of this amendment on the representation that Mysore will get in the House of the People will be that Mysore will have two additional seats in the House of the People. We have actually now sent 11 representatives from Mysore State to the House of the People. If this amendment of the Constitution enables us to send 13 representatives to the House of the People, I should like to ask my friends of the Opposition whether they consider that a curtailment of their right of representation or whether they consider it a positive improvement on the existing position. Having 13 representatives elected from the State of Mysore......

Sri K. PATTABHIRAMAN.—13 is an inauspicious number!

10-30 A.M.

Sri M. V. RAMA RAO.—I really do not know how to dispel the unholy superstitions which seem to haunt the mind of my friend Sri Pattabhiraman. Eleven, Sir, and seven are characterised as unlucky but, Sir, by those who are wedded to the soil. As a matter of fact it is common knowledge that when ragi or paddy is measured on the harvest field, the number 7 is not pronounced at all. Superstition is so strong that no amount of reasoning will compel or persuade people to pronounce the number 7 when they are doing that particular job. I shall leave alone that superstition.

(SRI M. V. RAMA RAO.)

Apart from that, I should have imagined, after the high speed oration which Sri Pattabhiraman made, that he had something more rational in his objection to the proposed resolution than setting forth merely a superstition that 13 is more unluckly than 11. I shall leave it there.

The other point made was that the entire scheme of the Constitution as it stands and the amendment as it has been made is to enable the growth of political parties in this country. Now, Sir, however, uncomfortable and however disappointing it may be for a person who has decided and determined not to belong to any political party, I think the future of this country in a political sense can be ensured satisfactorily only by a purposeful and well-organized growth of parties. Sir, I wish that the Opposition in this very House was more organized, was more effective........

Sri J. MOHAMED IMAM.—It is.

Sri M. V. RAMA RAO.—and, may I say, more painstaking so that they might have exercised a sobering and..

Sri L. SIDDAPPA (Channagiri).—Perhaps, it is keeping pace with the opposite benches.

Sri M. V. RAMA RAO.—Sir, I am surprised at the observation that Sri Siddappa has chosen to make. I thought he was not the one to take any lessons from us. Now that he is compelled to say that the quality of the Opposition partakes of the quality of the party in office, there is really nothing that we need cavil at. If the opposition as I was saying, had only been a little more effective, a little more organised, and a little more informed, then, I think, members like me, for instance, who happen to belong to the party in power would have found no occasion to make speeches of this type. Sir, it seems to me that the party in power to-day suffers from two handicaps. One is, we are perpetually accused of being too large in number. It was not our fault that we have been elected. It was open to the people to have elected those who gave us a contest. The other handicap is that the Opposition find it either necessary or convenient to leave it to us even to point out the defects and shortcomings in proposals that we bring forward for the consideration of this House. They simply take it easy and they think they have performed their public duties by the country exceedingly satisfactorily by staging a walk out or by crossing swords with one of the Ministers who, probably by reason of insufficient physical energy, is sometimes a little more irritable than he need be. Now, Sir, I shall leave that there.

Mr. SPEAKER.—You will now come back to the Bill again.

Sri M. V. RAMA RAO.—Sir, as I was saying this scheme of representation is intended to secure an orderly, healthy and progressive growth of the party system in this country. Uuless and until we have well-organised and effective parties working, there cannot be any prospect of our being able to achieve the big things we have set before ourselves.

Now, Sir, if this amendment enables us to secure an additional representation in the House of the People, what I ask in all seriousness, is the objection of the Opposition to that increased representation ? Do they object to our having two more representatives in the House of the People—two more than there are already ? Is it their argument that something should be done to reduce the representation that we already have in the House of the People ? I really do not understand them at all. So far as the State Legislature is concerned, the amendment of this particular Article leaves the question of representation as well as the total membership in a state of doubt because the amendment really deals with the representation in the House and the ceiling limit now fixed, of five hundred members in the House of the People, has yet to be reached by operation of the factor which Sri K. Pattabhi Raman referred

to and which seems to have raised great apprehensions in his mind. This country has been increasing its population at a rate which is not very complimentary to us at all. We have got a huge begging bowl in our hands and we are asking the nations of the world to give us food, this, that and everything. The only thing we seem to know is how to multiply ourselves and we seem to be doing it so fast that if the principle of numerical representation is to stand for ever, we shall be driven to make, as Sri Pattabhi Raman pointed out, very frequent changes in the clause which fixes the representation on a numerical basis. That, as I think the Law Minister did point out, is a matter which should really engage the attention of our representatives in the House of the People. I am sure, Sir, our representatives and those other representatives in the House of the People, the people who are interested in the question will give it the consideration that it really deserves. I, therefore, commend this resolution for the acceptance of this House and I hope and expect, Sir, that whatever little light I may have been able to throw on this subject will have persuaded my friends who sit in the Opposition—will have enabled them to see that this resolution ratifying the amendment is not going to place Mysore in any worse position with respect to our representation in the House of the People than at present and therefore they will also extend their support to this resolution ratifying the amendment.

Mr. SPEAKER.—The House will now rise for lunch and meet at 11-10 A.M.

The House rose for Lunch at Forty Minutes past Ten of the Clock and met again at Ten Minutes past Eleven of the Clock.

[Mr. SPEAKER in the Chair.]

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).— ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಮಾತನಾಡುತ್ತೇನೆ. ಇಂಡಿಯಾದೇಶದ ರಾಜ್ಯಾಂಗ ಯಾವ ತರಹ ಎನ್ನುವುದು ಕೂಡ ನಾವು ನಿರ್ದಿಷ್ಟವಾಗಿ ಹೇಳುವಂತಿಲ್ಲ. ಅದು ರಿಪಬ್ಲಿಕ್ unitary Government, federal Government ಮತ್ತು Commonwealthಗೆ ಸೇರಿ ಚಕ್ರವರ್ತಿಯ ಸಂಬಂಧವನ್ನೂ ಇಟ್ಟುಕೊಂಡಿದೆ. ಹೀಗೆ ಇದನ್ನು ನಾನಾ ರೂಪದಲ್ಲಿ ಪರಿಗಣಿಸಬಹುದು. ಇಲ್ಲಿ ರಾಜಪ್ರಮುಖರೂ ಇದ್ದಾರೆ, ಗವರ್ನರುಗಳೂ ಇದ್ದಾರೆ, ಕಮಿಷನರ್ಸ್ ಪ್ರಾವಿನ್ಸಸ್ ಇವೆ. ಹೀಗೆ ಯಾವ ಡೆಮಾಕ್ರಟಿಕ್ ಸ್ಟೇಟ್‌ನಲ್ಲೂ ಇಲ್ಲದೆ ಇರುವ ಅಂಶಗಳು ಇಂಡಿಯಾದಲ್ಲಿ ಇವೆ. ಆದುದರಿಂದ ಇಂಡಿಯಾವನ್ನು ಡೆಮಾಕ್ರಟಿಕ್ ಸ್ಟೇಟ್ ಎಂದು ಹೇಳುವುದಕ್ಕೆ ಯಾರಿಗಾದರೂ ಸಾಧ್ಯವಿಲ್ಲ. Federal state ಎಂದು ಹೇಳುವುದಕ್ಕೂ ಆಗುವುದಿಲ್ಲ. 'A', "B" ಮತ್ತು "C" ಎಂಬ ಮೂರು ತರಗತಿಗಳ ಸ್ಟೇಟ್‌ಗಳನ್ನಾಗಿ ವಿಂಗಡಿಸಿದ್ದಾರೆ. ಸುಮಾರು 27-28 ಸ್ಟೇಟುಗಳು ಸೇರಿಕೊಂಡಿವೆ. Federal ಎಂದರೆ, ಅಮೇರಿಕಾ ದೇಶದ Federal Constitution ನಂತೆ ಎಲ್ಲಾ subjectsಗಳಲ್ಲೂ ಎಲ್ಲಾ ಸಂಸ್ಥಾನಗಳಿಗೂ ಸಮನಾಗಿ ಸಂಬಂಧವಿದ್ದು, ಅವಕ್ಕೆ ಸರಿಸಮನಾದ ಪ್ರಾತಿನಿಧ್ಯ ದೊರೆಯಬೇಕು. ಯಾವರೀತಿ ಅಮೇರಿಕಾದಲ್ಲಿ ಪ್ರತಿಯೊಂದು ಸ್ಟೇಟಿಗೂ ಇಬ್ಬರು representatives, federal councilನಲ್ಲಿ ಇರುತ್ತಾರೋ, ಅದೇ ರೀತಿ ಪ್ರತಿಯೊಂದು ಸಂಸ್ಥಾನಕ್ಕೂ ಪ್ರಾತಿನಿಧ್ಯ ದೊರೆಯಬೇಕಾದುದು ನ್ಯಾಯವಾಗಿದೆ. Parliamentನಲ್ಲಿ ಇರತಕ್ಕಂಥ ಮಾನ್ಯ ಸದಸ್ಯರು ಬರೀ international politics ಇಲ್ಲವೇ ಒಂದು ದೊಡ್ಡ ಉದ್ಯಮದ ವಿಚಾರ ತಿಳಿದುಕೊಂಡಿದ್ದರೆ ಸಾಲದು. ಅವರು ನಿಜವಾಗಿ ಸ್ಥಳೀಯ constituencyಯಲ್ಲಿ ಇರತಕ್ಕ ಜನಗಳ ಒಂದು ಕೊಂಡಿಯ ಕೀಲಿನಂತೆ ಇರಬೇಕು. ನಮ್ಮ ದೇಶದಲ್ಲಿ ಬರೀ federal subjects —ರೈಲ್ವೆ, ಪರದೇಶವಿಚಾರ ಮತ್ತು communications—ಇಷ್ಟು ಮಾತ್ರ ಅಲ್ಲ. ಎಲ್ಲಿ ಒಂದು ರಸ್ತೆ ಆಗಬೇಕಾದರೂ ಕೇಂದ್ರವನ್ನು ಗ್ರಾಂಟ್‌ಕೊಡಿ ಎಂದು ಕೇಳಬೇಕು. ಇಲ್ಲಿ ಇರತಕ್ಕಂಥ Highwaysಗೆ ನೂರು ರೂಪಾಯಿಗಳು ಹೆಚ್ಚಿಗೆ ಬೇಕಾದರೆ ನಾವು ಕೇಂದ್ರದವರ ಮೇಲೆ depend ಆಗಬೇಕು. ವಿದ್ಯಾಭ್ಯಾಸದ ವಿಚಾರದಲ್ಲಿಯೂ ಕೂಡ ಪ್ರತಿಯೊಬ್ಬ ಪ್ರಜೆಗೂ ಕೂಡ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡಬೇಕೆಂದರೆ, ದುಡ್ಡು Local Government ಕೈಯಲ್ಲಿ ಇಲ್ಲದೇ ಇರುವುದರಿಂದ ಅವರು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಒಂದು ಕೈಗಾರಿಕೆ, ಒಂದು ನೀರಾವರಿ ಕೆಲಸ, ಇವು ಹಾಗಿರಲಿ, ಒಂದು ಜಪಾನಿನ ವ್ಯವಸಾಯದ ಪದ್ಧತಿಯನ್ನು ಇಲ್ಲಿ ಕೈಕೊಳ್ಳಬೇಕಾದರೂ ಕೇಂದ್ರ ಸರ್ಕಾರದವರು 10 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಮುಂದೆ ಬರಬೇಕಾಗಿದೆ. ಮುಖ್ಯವಾಗಿ ದಕ್ಷಿಣ ದೇಶವನ್ನು ಅವರು ನಿರ್ಲಕ್ಷ್ಯ ಮಾಡಿದ್ದಾರೆ ಎಂಬುದಕ್ಕೆ ಇದೇ ನಿದರ್ಶನ. ಉತ್ತರ ಪ್ರದೇಶದಿಂದ ಬರತಕ್ಕ ಸದಸ್ಯರು 300ರ ಮೇಲೆ ಕೇಂದ್ರದ Parliamentನಲ್ಲಿ ಇದ್ದಾರೆ. ಅದೂ ಅಲ್ಲದೆ ಮೇಲ್ಮನೆಯಲ್ಲಿ ಉತ್ತರ ಪ್ರದೇಶದಿಂದ 31 ಜನ ಬಂದು ನಾವು ಅಲ್ಲಿಗೆ 6 ಜನ ಹೋದರೆ ನಮ್ಮ ದೇಶದ ಮಾತು ಎಲ್ಲಿ ನಡೆಯುತ್ತದೆ? ಅದು ನಡೆಯುವುದಕ್ಕೆ ಸಾಧ್ಯವೇ ಎಂಬುದನ್ನು ಕೂಡಾ ಯೋಚನೆ ಮಾಡಬೇಕು.

(ಶ್ರೀ ಬಿ. ಹುಚ್ಚೇಗೌಡ)

ಇದರಿಂದ ಏನಾಗಿದೆ ಎಂದರೆ, ಈ ಕಾನ್ಸ್ಟಿಟ್ಯೂಷನ್ ಬದಲಾವಣೆಯಾಗುವವರೆಗೆ ನಾವು ಏನನ್ನೂ ಹೇಳುವುದಕ್ಕಾಗುವುದಿಲ್ಲ. ಹೀಗೆ ತಾವು ಯಾವಾಗ ಎಂದರೆ ಆಗ ರೆಕರಿಂಗ್ ಅಮೆಂಡ್‌ಮೆಂಟುಗಳನ್ನು ತೆಗೆದುಕೊಂಡು ಬರುತ್ತಿರುವುದು ಬಹಳ ಶೋಚನೀಯ. ಇಷ್ಟೇ ಅಲ್ಲದೆ, ಈಗಾಗಲೇ ಮಾನ್ಯ ಶ್ರೀ ಕೆ. ಪಟ್ಟಾಭಿರಾಮನ್‌ರವರು ಹೇಳಿರುವಂತೆ, ನಮ್ಮ ಸರ್ಕಾರ ಆಡಳಿತವನ್ನು ಒಂದು ಫ್ಯಾಸಿಸ್ಟ್ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದೆ. ಈ ದಿವಸ ನಾವು ಈ ಚುನಾವಣೆ ಕ್ಷೇತ್ರಗಳನ್ನು ಇನ್ನೂ ವಿಶಾಲಮಾಡತಕ್ಕಂಥ ನೀತಿಯನ್ನೊಪ್ಪಿಕೊಂಡರೆ ದೇಶದ ಹಿತರಕ್ಷಣೆಗಳೆಲ್ಲವೂ ನಾಶದ ದಾರಿಯನ್ನು ಹಿಡಿಯಬೇಕಾಗುತ್ತದೆ.

ಶ್ರೀ ಎಂ. ವಿ. ರಾಮರಾಯರೇನೋ ಅನೇಕ ಪಾಠಗಳನ್ನು ಕಲಿತಿರಬಹುದು, ಅಧ್ಯಕ್ಷರು ಅವರಿಗೆ ಇನ್ನು ಕೊಂಚ ಕಾಲಾವಕಾಶವನ್ನು ಕೊಟ್ಟಿದ್ದರೆ ಅವರಿನ್ನೂ ಏನೇನು ಪಾಠಗಳನ್ನು ಕಲಿಸುತ್ತಿದ್ದರೋ ಅದು ತಿಳಿಯದಾಗಿದೆ. ಆದರೆ ಅವರ ಪಾಠಗಳನ್ನು ಕೇಳತಕ್ಕವರು ಯಾರಿದ್ದಾರೆ? ದಕ್ಷಿಣದೇಶದಲ್ಲಿ ಅದರಲ್ಲೂ ನಮ್ಮ ಮೈಸೂರು ಸಂಸ್ಥಾನಕ್ಕೆ ಇಲ್ಲಿಯತನಕ ತನ್ನ ಕಾಲಮೇಲೆ ತಾನು ನಿಲ್ಲುವಂಥ ಚೈತನ್ಯವಿತ್ತು. ಆದರೆ ಈ ದಿವಸ ಇದು ತನ್ನ ವ್ಯವಸಾಯ, ಕೈಗಾರಿಕೆ ಅಥವಾ ಮತ್ತೊಂದು ಯಾವ ಒಂದು ಸಣ್ಣಪುಟ್ಟ ನೀರಾವರಿಯೋಜನೆ ಇತ್ಯಾದಿ ಪ್ರತಿಯೊಂದಕ್ಕೂ ತೀರಾ ಅಲ್ಪಸ್ವಲ್ಪ ಮೊಬಲಗಿಗೂ, ಎಂದರೆ 1 ಲಕ್ಷ 2 ಲಕ್ಷಕ್ಕೂ ಸಹ "ನೀವು ಕೊಡಿ" ಎಂದು ಕೇಂದ್ರ ಸರ್ಕಾರದವರನ್ನು ಕೇಳಬೇಕಾದಂಥ ಪರಿಸ್ಥಿತಿ ಬಂದಿದೆ. ಪರಿಸ್ಥಿತಿ ಹೀಗೆ ಇರುವಾಗ, ಅವರು $7\frac{1}{2}$ ಲಕ್ಷಕ್ಕೆ ಇರುವಂಥ ಚುನಾವಣಾಸ್ಥಾನವನ್ನೂ $8\frac{1}{2}$ ಲಕ್ಷಕ್ಕೆ ಮಾಡಬೇಕೆಂದು ಹೇಳಿರುವುದು ಸರಿಯಲ್ಲ. ನಮಗೆ ಈಗಾಗಲೇ ಲಭಿಸಿರತಕ್ಕ ಅನುಭವದಿಂದ ಈ ಚುನಾವಣೆಗಳ ಆಟ ಎಂಥಾದ್ದು ಎಂಬುದು ಚೆನ್ನಾಗಿ ಮನದಟ್ಟಾಗಿದೆ. ಇಲ್ಲಿ ಕಳೆದ ಐದು ವರ್ಷಗಳಲ್ಲಿದ್ದಂಥ ಉತ್ಸಾಹ—ಉದ್ದೇಶಗಳು ಈ ದಿವಸ ಇರುವುದಿಲ್ಲ. ಜನರಲ್ಲೆಲ್ಲಾ ನಿರುತ್ಸಾಹ ಭಾವನೆಯುಂಟಾಗಿ, ನಾವು ಅವರಿಗೆ ಏನೇನು ಸಹಾಯಗಳನ್ನು ನೀಡುತ್ತೇವೆಂದು ಹೇಳಿದ್ದೆವೋ ಅವುಗಳೊಂದೂ ಅವರಿಗೆ ಲಭಿಸದೆ ಹೋಗಿ, ಅವರೆಲ್ಲರಲ್ಲೂ ಈ ದಿವಸ ಬಹಳ ಜಿಗುಪ್ಸೆ ಉಂಟಾಗಿದೆ. ಹೋದ ವರ್ಷಕ್ಕಿಂತಲೂ ಈ ವರ್ಷ ದೇಶದಲ್ಲಿ ತುಂಬಾ ಅಭಾವಪರಿಸ್ಥಿತಿ ಉಂಟಾಗಿದೆ. ದೇಶದಲ್ಲಿ ಎಲ್ಲೊಂದು ಕಡೆ ಹೆಚ್ಚು ನಗಲಾಟೆಯನ್ನು ಜನರು ಮಾಡುತ್ತಾರೋ ಅಂಥ ಕಡೆಗೆ ಮಾತ್ರ ಸರ್ಕಾರದವರ ಕಣ್ಣು ಬೀಳುತ್ತಿದೆಯೇ ಹೊರತು ಬಾಕಿಕಡೆಗೆ ಅವರ ಗಮನ ಬೀಳುತ್ತಿಲ್ಲವೆಂದು, ಶ್ರೀಯುತರಾದ ಕೆ. ಪಟ್ಟಾಭಿರಾಮನ್‌ರವರೂ ಮತ್ತು ಮಹಮದ್ ಇಮಾಂರವರೂ ಹೇಳಿರತಕ್ಕದ್ದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ತಾವು ನಮ್ಮ ಕೇಂದ್ರ ಸರ್ಕಾರಕ್ಕೆ ವಿಕೇಂದ್ರೀಕೃತ ಆಡಳಿತಕ್ಕೆ ದಾರಿ ಹಾಕಬೇಕೆಂಬ ವಿಚಾರದಲ್ಲಿ ಸಲಹೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).—ನಾವು ಈ ದಿವಸ ಈ ತಿದ್ದುಪಡಿಗೆ ಒಪ್ಪದೆ ಇದ್ದರೆ, ವಿಕೇಂದ್ರೀಕೃತ ಸರ್ಕಾರ ಆಗಲು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಬಿ. ಹುಚ್ಚೇಗೌಡ.—ಆ ರೀತಿ ಸಲಹೆ ಮಾಡಬೇಕಾದದ್ದು ನಮ್ಮ ಸರ್ಕಾರದ ಕರ್ತವ್ಯ, ಆದಕಾರಣ ನಾವಿನ್ನೂ ಈ ಮಸೂದೆಯ ಬಗ್ಗೆ ಓದಿನೋಡಿಕೊಳ್ಳಬೇಕಾದ ವಿಚಾರ ಬಹಳವಾಗಿರುವುದರಿಂದ ತಾವು ಇದನ್ನು ಸಸ್ಪೆನ್ಷನ್‌ಗೆ ಇಟ್ಟು ನಾಳೆ ಜೂನ್ ಅಧಿವೇಶನಕ್ಕೆ ತನ್ನಿ. ಆಗಬೇಕಾದದ್ದನ್ನು ನೋಡೋಣ. ಹಾಗೆ ಮಾಡದೆ ಏನೋ ಇಲ್ಲಿ ನಮಗೆ ಪಾರ್ಟಿ ಬಲವಿದೆ ಎಂಬ ಒಂದು ಅಹಮ್ಮಿನಿಂದ ತಾವು ಇದನ್ನು ಪಾಸ್‌ಮಾಡಬಹುದು. ಇದರೆ ನಮ್ಮ ಪಾರ್ಟಿಯ ಬಲವೂ ಸ್ವಲ್ಪ ಹೆಚ್ಚುಗೆ ಇದ್ದಿದ್ದರೆ ಆಗ ಇದರ ಪರಿಣಾಮವೇನಾಗುತ್ತಿತ್ತು? ಇದನ್ನು ತಳ್ಳಿ ಹಾಕುವಂಥ ಅವಕಾಶವಿತ್ತು. ಈ ಹಿಂದೆ ಇಂಥ ಅವಕಾಶವಿದ್ದರೂ ನಾವು ಹಾಗೆ ಮಾಡಿರುವುದಿಲ್ಲ

Before the Bill was passed, the opinion of this House might have been included in the recommendation of the State Government.

Sri J. MOHAMED IMAM.—But the opinion of the Government was sent.

ಶ್ರೀ ಬಿ. ಹುಚ್ಚೇಗೌಡ.—ಶ್ರೀ ವೆಂಕಟಪ್ಪನವರು ಹೇಳಿದರು, ಇದಕ್ಕೆ ನಾವು ಅನುಮತಿ ನೀಡದೆ ಹೋದರೆ ವಿಕೇಂದ್ರೀಕರಣ ಹೇಗೆ ಆಗುತ್ತದೆ ಎಂದು. ಹೌದು, ಒಬ್ಬ ಮ್ಯಾಜಿಸ್ಟ್ರೇಟರು ಯಾರಿಗಾದರೂ ಒಂದು ಶಿಕ್ಷೆಯನ್ನು ವಿಧಿಸಿದಾಗ ಆ ಮನುಷ್ಯನು ಅದನ್ನು ಒಪ್ಪಿಕೊಳ್ಳದಿದ್ದರೆ ವಿಧಿಯೇ ಇಲ್ಲವೆಂದು ಹೇಳುತ್ತಿರುವಾಗ, ಆತನು ಆ ಶಿಕ್ಷೆಯನ್ನು ಒಪ್ಪಿಕೊಳ್ಳದೆ ಇರುವುದಕ್ಕೆ ಆಗುವುದೇ ಇಲ್ಲ. ಇದೂ ಅದರಂತೆಯೇ ಆಗಿರುತ್ತದೆ. ಇದನ್ನು ನಾವು ಜನರಿಗೆ ಅನಾನುಕೂಲವಾದ ಪರಿಸ್ಥಿತಿಗೆ ಈಡುಮಾಡುತ್ತದೆ ಯೆಂಬುದನ್ನು ತಿಳಿದೂ ತಿಳಿದೂ ಇದಕ್ಕೆ ಬಲವಂತದಿಂದ ಈಗ ಒಪ್ಪಿಗೆಯನ್ನು ಕೊಡಬೇಕೆಂದರೆ ಅದುಹೇಗೆ ಸಾಧ್ಯ? ಹಿಂದೆ ಆಟೋಕ್ರೆಟಿಕ್ ಸರ್ಕಾರವೆಂದು ಯಾವುದನ್ನು ತಾವು ಕರೆಯುತ್ತಿದ್ದಿರೋ, ಅಂಥ ಸರ್ಕಾರ ಏನೇನು ಕೆಲಸ ಕಾರ್ಯಗಳನ್ನು ಮಾಡುತ್ತಿತ್ತೋ, ಅದೇ ಕೆಲಸಕಾರ್ಯಗಳನ್ನು ತಾವು ಈ ದಿವಸ ಈ 'ಡೆಮೊಕ್ರಸಿ' ಎಂಬ ಒಂದು ಪದವನ್ನು ಉಪಯೋಗಿಸಿಕೊಂಡು ಮಾಡುತ್ತಿದ್ದೀರಿ. ನಾವು ಎಷ್ಟೋ ನೀಯತ್ತಿನಿಂದ ನಮ್ಮ ಅಭಿಪ್ರಾಯಗಳನ್ನು ಕೊಟ್ಟರೂ ಅದಕ್ಕೆ ತಾವು ಮಾನ್ಯತೆ ತೋರಿಸುತ್ತಿಲ್ಲ. ನಾನು ಶ್ರೀ ವೆಂಕಟಪ್ಪನವರಿಗೆ ಒಂದು ಸವಾಲ್ ಹಾಕುತ್ತೇನೆ. ಈ ಸರ್ಕಾರ ನಮ್ಮ ಯಾವ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟಿದೆಯೆಂಬುದನ್ನು ಅವರೇ ತಿಳಿಸಲಿ ಎಂದು. ಈ ದಿವಸ ನಾವು ಇದರ ಬಗ್ಗೆ ಏನೇನು ಅಭಿಪ್ರಾಯಗಳನ್ನು ನೀಡುತ್ತಿದ್ದೇವೋ ಅವುಗಳನ್ನು ಕೇಂದ್ರದವರಿಗೆ ತಿಳಿಸಿ, ಅವರು ಇದನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಲಿ. ನಾವು ಈ ದಿವಸ ಈ ಮಸೂದೆಯನ್ನು ಟೀಕೆ ಮಾಡಬೇಕೆಂದೇನೂ ಹೇಳುತ್ತಿಲ್ಲ. ಇಲ್ಲಿಯತನಕ ನಮಗೆ ಅನುಭವಪೂರ್ವಕವಾಗಿ ತಿಳಿದುಬಂದಿರತಕ್ಕ ಕಷ್ಟನಿಷ್ಠೂರಗಳನ್ನು ಮಾತ್ರ ತಿಳಿಸುತ್ತಿದ್ದೇವೆ, ಅಷ್ಟೆ. ಹೀಗೆ ಗೊತ್ತಿರತಕ್ಕ ಅಂಶಗಳನ್ನೂ ತಾವು ಮುಚ್ಚಿಟ್ಟುಕೊಂಡರೆ ಅದರಿಂದ ಏನು ಪ್ರಯೋಜನ? ಡೆಲ್ಲಿ ಪಾರ್ಲಿಯಮೆಂಟಿನಲ್ಲಿ ಕೂಡ ಅನೇಕ ಜನ ಕಾಂಗ್ರೆಸ್ ಸದಸ್ಯರು ಇದನ್ನು ಅಲ್ಲಿ ವಿರೋಧಿಸಿದ್ದಾರೆ.

ಶ್ರೀ ಕೆ. ಪಟ್ಟಾಭಿರಾಮನ್‌ರವರೂ ಸಹ ಸುಮ್ಮನೆ ಎಲ್ಲರೂ "Yes men"ಗಳಾಗ ಬೇಡಿ ಎಂದು ಹೇಳಿದ್ದಾರೆ. ಇದರ ನಿತ್ಯವ್ಯವಹಾರದಲ್ಲಿ

ಯಾರಿಗೆ ಕಾಲು ಚುಚ್ಚುತ್ತದೆಯೋ ಅವರಿಗೇ ಚೆನ್ನಾಗಿ ಇದು ಗೊತ್ತಾಗುವುದು. ಆದುದರಿಂದ ಈಗ ಕಳೆದ ಐದು ವರ್ಷಗಳಲ್ಲಿ ನಾವು ಪಡೆದುಕೊಂಡಂಥ ಅನುಭವವನ್ನು ಚೆನ್ನಾಗಿ, ಒಂದು ಸರಿಯಾದ ರೀತಿಯಲ್ಲಿ ಅದನ್ನು ಉಪಯೋಗಮಾಡಿಕೊಳ್ಳಬೇಕಾದದ್ದು ನಮ್ಮೆಲ್ಲರಿಗೂ ಅತ್ಯಗತ್ಯ. ಅದರಲ್ಲಿಯೂ ಈ ಹಿಂದಿನ ಐದು ವರ್ಷಗಳಲ್ಲಿ ಇದ್ದಂಥ ಪರಿಸ್ಥಿತಿ ಈ ದಿವಸ ಇದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ಆ ಕಾರಣದಿಂದಲೂ ನಾವು ಈ ಹಿಂದೆ ಮಾಡಿದಂಥ ಸಿದ್ಧಾಂತಗಳನ್ನು ಈಗ ಬದಲಾವಣೆ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಹತ್ತು ವರ್ಷಗಳಿಗೊಮ್ಮೆ ಪ್ರಜಾಸಂಖ್ಯೆ ಏರುತ್ತಿದ್ದರೆ, ಚುನಾವಣಾ ಪದ್ಧತಿಯಲ್ಲೂ, ಈ ಬದಲಾವಣೆಗಳಿಗೆ ತಕ್ಕಹಾಗೆ, ನಾವು ಮೂಲಭೂತ ತತ್ತ್ವಗಳನ್ನು ಸಮಯ ಸಂದರ್ಭಗಳಿಗನುಸಾರವಾಗಿ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಬದಲಾವಣೆಮಾಡದೆ ಹೋದರೆ ಅದು ಖಂಡಿತ ಸಾಧ್ಯವೇ ಇರುವುದಿಲ್ಲ. ಇದನ್ನು ಮಾಡದಿದ್ದರೆ ಅನೇಕ ತೊಂದರೆಗಳಾಗುತ್ತವೆ. ನಮ್ಮಲ್ಲಿದ್ದ ಕೋಟ್ಯಾಂತರ ರೂಪಾಯಿಗಳ ಉತ್ಪತ್ತಿ ಬಾಬುಗಳೆಲ್ಲಾ ಹೊರಟುಹೋದವು. ಈಗ ಇರತಕ್ಕ ಕಾನೂನಿನ ಪ್ರಕಾರ 7½ ಲಕ್ಷ ಪ್ರಜಾಸಂಖ್ಯೆ ಆಗಬೇಕಾದರೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಈ ಮೂರು ಜಿಲ್ಲೆಗಳೆಲ್ಲಾ ಸೇರಬೇಕಾಗುತ್ತದೆ. ಹೀಗೆ ಆಗತಕ್ಕ ಮೂರು ಜಿಲ್ಲೆಗಳ ಜನರ ಕಷ್ಟಸುಖಗಳನ್ನೂ ಕೇಳಿಕೊಂಡು ಕೆಲಸಮಾಡಲು ಸಾಧ್ಯವಿದೆಯೇ? ಹಾಗೆ ಸಾಧ್ಯವಿರುವುದಾದರೆ, ತಾವು ಇಡೀ ಮೈಸೂರು ಸಂಸ್ಥಾನಕ್ಕೇ ಒಬ್ಬ ಸದಸ್ಯರು ಸಾಕು ಎಂದು ನಾಳೆ ಹೇಳಿದರೂ ಹೇಳಬಹುದು. ಹಾಗೆ ಮಾಡಿದರೆ ತಲೆಮನೆಗಳು ಎಲ್ಲಾ ಹೋಗುತ್ತವೆ. ಇಂಥ ಅಪಾರವಾದ ಚುನಾವಣಾಕ್ಷೇತ್ರಗಳಲ್ಲಿ ಚುನಾಯಿತರಾಗಿ ಬರಲು ಬಹಳ ಕಷ್ಟವಿದೆ. ಅದಕ್ಕೆಲ್ಲಾ ಒಂದು ಸರಿಯಾದ ಪಾರ್ಟಿ ವ್ಯವಸ್ಥೆ ಇದ್ದರೆಯೇ ಅದು ಸಾಧ್ಯ. ಈಗ ತಾವು ಇಲ್ಲಿ ತಂದಿರತಕ್ಕ ತಿದ್ದುಪಡಿಯ ಬಗ್ಗೆ ಈ ಮಾನ್ಯ ಸಭೆಯಲ್ಲಿ ಸದಸ್ಯರು ಏನೇನು ಅಭಿಪ್ರಾಯಗಳನ್ನು ಕೊಟ್ಟಿದ್ದಾರೋ ಅವುಗಳನ್ನೆಲ್ಲಾ ತಾವು ಕೇಂದ್ರ ಸರ್ಕಾರದವರ ಗಮನಕ್ಕೆ ತೆಗೆದುಕೊಂಡು ಹೋಗಬೇಕು. ಅಲ್ಲಿ ಈ ತೊಂದರೆಗಳನ್ನೆಲ್ಲಾ ಚೆನ್ನಾಗಿ ವಿವರಣೆಮಾಡಿ ತಾವು ವಿಕೇಂದ್ರಿಕೃತ ಚುನಾವಣೆಗೆ ಮತ್ತು ವಿಕೇಂದ್ರಿಕೃತ ಆಡಳಿತಕ್ಕೆ ಅನುಗುಣವಾದ ರೀತಿಯಲ್ಲಿ ಕಾರ್ಯಗಳನ್ನು ನಡೆಸುವಂತೆ ಏರ್ಪಾಡು ಮಾಡಬೇಕು. ನಮ್ಮ ಅಭಿಪ್ರಾಯಗಳು ಕೇಂದ್ರ ಸರ್ಕಾರದವರ ನಿಗಾಕ್ಕೆ ಹೋಗದೆ ಇದ್ದ ಭಾಗದಲ್ಲಿ ನಾವು ಈ ದಿವಸ ಈ ಮಸೂದೆಯ ಮೇಲೆ ಮಾತನಾಡುವುದಕ್ಕೆ ಕಾರಣವೇ ಇರುತ್ತಿರಲಿಲ್ಲ. ಆದಪ್ರಯುಕ್ತ ತಾವು ಈ ದಿವಸ ಇಲ್ಲಿ ನಾವು ಏನೇನು ಅಭಿಪ್ರಾಯಗಳನ್ನು ಸೂಚಿಸಿದ್ದೇವೆಯೋ ಅವುಗಳನ್ನೆಲ್ಲಾ ಕೊಂಚವೂ ಬದಲಾವಣೆ ಮಾಡದಂತೆ ಹಾಗೆಯೇ ಕೇಂದ್ರದವರಿಗೆ ಕಳುಹಿಸಿಕೊಡಬೇಕೆಂಬುದನ್ನು ತಮಗೆ ತಿಳಿಸಲು ನಾನೀಗ ನಿಂತಿದ್ದೇನೆ. ಹೀಗೆ ಮಾಡಿದರೆ ನಿತ್ಯ ವ್ಯವಹಾರದಲ್ಲಿ ಏನೇನು ತೊಂದರೆಗಳಿರುತ್ತವೆಯೆಂಬ ಅಂಶ ಸದಸ್ಯರಿಗೆ ಚೆನ್ನಾಗಿ ಮನದಟ್ಟಾಗಿದ್ದರೂ ಅಂಥ ವಿರೋಧ ಪಾರ್ಟಿಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬಾರದಿರುವುದರಿಂದ ಈ ಮಸೂದೆ ಹೀಗೆ ಪಾಸಾಗಿ ಬಂದಿದೆ ಎಂಬ ಅಂಶ ಅವರಿಗೆ ವೇದ್ಯವಾಗಬೇಕು. ನಮ್ಮ ದೇಶದಲ್ಲಿ ಎಲ್ಲಾ ಮುಖಂಡರೂ ವಿಕೇಂದ್ರೀಕೃತ ಸರ್ಕಾರಕ್ಕೆ ಬೆಂಬಲವಿತ್ತಿದ್ದಾರೆಂದು ಕೇಂದ್ರದವರಿಗೆ ತಾವು ತಿಳಿಸಿ, ಈಗಲಾದರೂ ತಾವು ಹೇಳುತ್ತಿದ್ದ ಅನೇಕ ವಿಚಾರಗಳಲ್ಲಿ ಇದು ಒಂದನ್ನಾದರೂ ಮಾಡಿ ತಮ್ಮ ಪ್ರೆಸ್ಟೀಜನ್ನು ಉಳಿಸಿಕೊಳ್ಳುತ್ತೀರೆಂದು ನಂಬಿದ್ದೇನೆ. ನೀವು ಈಗ ಇಲ್ಲಿ ಅನುಕರಣೆಯಲ್ಲಿ ತರುತ್ತಿರುವ ರೀತಿಯನ್ನು ನೋಡಿದರೆ, ತಮಗೂ ಕೂಡ ಆ ವಿಕೇಂದ್ರೀಕೃತ ನೀತಿಯನ್ನು ಅನುಸರಿಸಬೇಕೆಂಬ ಮನೋಭಾವವಿರುವಂತೆ ಕಾಣುತ್ತಿಲ್ಲ. ತಾವು ಇದಕ್ಕೆ ಒಪ್ಪಿಕೊಂಡರೆ ವರ್ಷಂಪ್ರತಿ ತಮ್ಮ ಚುನಾವಣೆಕ್ಷೇತ್ರವನ್ನು ಹೆಚ್ಚಿಸುತ್ತಾ ಹೋಗಬೇಕಾಗುತ್ತದೆ. ಇದಕ್ಕೆ ಟ್ರಾವಂಕೂರಿನವರೂ ಸಹ ವಿರೋಧಾಭಿಪ್ರಾಯವನ್ನು ಸೂಚಿಸಿದ್ದಾರೆ. ಆದಕಾರಣ ನಾನೂ ಸಹ ಈಗ ಈ ಸಂಬಂಧದಲ್ಲಿ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವಂತೆ ಮಾಡಬೇಕೆಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

(Sri P. R. Ramaiya rose.)

Mr. SPEAKER.—We have got one or two Bills to be considered. We have to close at 12-30 P.M.

Sri A. G. RAMACHANDRA RAO.—Sir, I am very glad that this resolution has elicited the mind of this House regarding not only the question before us but also the other aspects of the Constitution. As I have already submitted, they wanted to avail themselves of this opportunity to express themselves on various aspects of the Constitution. True, those aspects are before us and have got to be solved.

Ours is a very big country, as our friends have already said, and perhaps the biggest democracy in working. All the same, our leaders have devised a living Constitution and made it correspond to the living currents that are there. Hence we do not find any rigid affinities for any one single principle. There is no other comparison for us to draw any inspiration because there is no other democracy which is so big either in area or in population. Many a time, the illustration of England was brought. England compared with India is almost one-sixth of the population of India and one-seventh of its area. England itself has no constitution. The constitution of England is that of the Great Britain, and in Great Britain, Scotland and Wales are included and it is not a federal Constitution as some people seem to think. If you take the British

(SRI A. G. RAMACHANDRA RAO.)

Commonwealth, it is also a congregation of States having different Constitutions. For instance, in Canada States have residuary powers. Take Australia, the Centre has residuary powers. Because it is a living Constitution they have gone on moulding it to meet the needs of the people. If you want to compare India to any one of them, it is only to the British Commonwealth of Nations and not to England which necessarily means Great Britain. In the absence of any other country from which we could draw a lesson we have to mould our life and draw up our own Constitution and that is what the elders have done.

There are, no doubt, some very important aspects, namely, the financial dependency of the States on the Centre, which is looming large about which many members have drawn our attention on many occasions in this House and secondly, the inequality of States. For instance, Coorg with 2 lakhs and U. P. with 750 lakhs, both of them form units of the Federation. Some time ago, it was said by some member, it was a monstrosity in the Constitution. That is there. That means, recasting the whole State system on some proper understandable basis conforming to the federal principles on the one hand and the aspirations of the people on the other, is also necessary. And then residuary powers, whether they should be in the Centre or in the State—on that one question we have almost spent, I think, about 20-30 years and it was felt that it was necessary, at any rate, for the present that the powers should be vested in the Centre in order to unify and strengthen the country and when that need passes and when the States are recast and they accumulate strength in the wisdom of the future, it will be so devised......

Sri S. GOPALA GOWDA (Sagar-Hosanagar).—It will be more and more unified.

Sri A. G. RAMACHANDRA RAO.—It is just possible that future generation in their wisdom might feel that residuary powers must go to the State. At any rate, our present question is only one of the several that are there and that is placed before us for a consideration of the subject. On this occasion I wish to state that in order that the Centre might know the view points put forward by the Hon'ble Members on the several aspects of the questions, we will not only send the resolution but also the proceedings of the House for their consideration and for such action as they deem fit to take later. It will not be quite relevant for us to go further on that topic.

Sri M. LINGANNA (Nanjangud).—If the amendment is not moved and accepted, may I know whether the ceiling limit would be changed with the change of population?

Sri A. G. RAMACHANDRA RAO.—As I see, this resolution has been passed by the Houses of Legislature in the Centre and I feel that all the other States will agree to it. It becomes inevitable.

The ceiling limit changes along with the change of the population. The population is increasing......

Sri M. LINGANNA.—As per the Census of 1951, if the constituencies are changed as per the original lower and upper limit of 500,000 and 750,000, would the elected members to the House of the People exceed 500 which is the limit according to the Constitution?

Sri A. G. RAMACHANDRA RAO.—I think so. That is what my calculation is. According to the present resolution, our State's representation increases by one certainly and by two possibly. I have already answered that question. Regarding the strength of the House, that is not before us. At any rate, it is 500. It is said that if there are 50 people in the House, there will be deliberation; if there are 500, there will be discussion and if there are more than 500, there will be a debate. I hope all of you would want to avoid that,

and it is in the wisdom of the members of the Constituent Assembly that that number should not be exceeded. If, as one member put it, we wish to have the constituencies of the type they in Great Britain are having, the number will be more than 3,000. Already the 500 members in the Parliament were complaining that they were not getting sufficient opportunities to express what all they had in mind. If we increase the number, what will be the fate ? I leave it to the members to imagine. Therefore, within the confines of the principles involved in the present resolution, this kind of arrangement becomes inevitable and I do not want to argue on any other point, because all that could be said has been said and in a way they have also conceded. Within the ambit of the present Constitution, this becomes inevitable. Most of the Hon'ble Members have acceded. Therefore, I request that the resolution may be adopted, and, as I have said, the proceedings of the House will also be sent with this resolution for the edification of the Centre.

Mr. SPEAKER.—The question is :

"That this House ratifies the amendment of Articles 81 of the Constitution proposed to be made by the Constitution (Second Amendment) Bill, 1952, as proposed by the two Houses of Parliament."

The motion was adopted.

THE MYSORE AGRICULTURISTS' RELIEF (AMENDMENT) BILL, 1953.

Mr. SPEAKER.—Now the debate on the Mysore Agriculturists' Relief (Amendment) Bill, 1953 will continue.

Sri A. G. RAMACHANDRA RAO (Minister for Law and Education).—It was agreed at that time that discussion on this Bill might be proceeded with. Meanwhile some amendments have been tabled. They may also be considered.

Mr. SPEAKER.—There are two amendments that stand in the name of Sri Bheemappa Naik. After the motion for the consideration of the Bill is passed, the amendments will be taken.

Sri M. LINGANNA (Nanjangud).—If the Bill as well as the amendments are taken into consideration, that might facilitate discussion.

Sri A. G. RAMACHANDRA RAO.—The procedure is : after the consideration stage is over, amendments are taken up.

Mr. SPEAKER.—The question is :

"That the Mysore Agriculturists' Relief (Amendment) Bill, 1953 be taken into consideration."

The motion was adopted.

Mr. SPEAKER.—Shall I take it that Sri Bheemappa Naik is not moving that the Bill be referred to a Select Committee ?

Sri A. BHEEMAPPA NAIK (Molakalmuru).—I am not moving.

Mr. SPEAKER.—Then we will take up the Bill, clause by clause. Clauses 2 and 3. The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Clause 4. There is an amendment given notice of by Sri Bheemappa Naik.

Sri A. BHEEMAPPA NAIK.—Sir, I beg to move :

'That for clause 4, the following clause shall be substituted :—

4. *Amendment of section 24 of Mysore Act XVIII of 1928 and application to certain suits.*—(1) In section 24 of the principal Act for the words " shall be deemed to be substituted for those prescribed in the Second column in